# ಅಂತರ್ಜಾತಿ ಮತ್ತು ಅಂತರ್ ಧರ್ಮೀಯ ಪ್ರೇಮ ವಿವಾಹಗಳ ಕುರಿತು ಯುವಜನರ ನಿಲುವು: ಒಂದು ಕಿರು ಅಧ್ಯಯನ

ವರದಿ

February 2021

Samvada ಸಂವಾದ

# KANAJA

## *Youth Research Cell*

*This research was made possible through a grant by*

AMERICAN JEWISH WORLD SERVICE

# ಕೃತಜ್ಞತೆಗಳು

## ಸಂಶೋಧನ ತಂಡ

ಉಮ್ಮೆಜೈಬಾ.ಆರ್
ಪವಿತ್ರ ಜ್ಯೋತಿಗುಡ್ಡೆ
ಆಕಾಶ್.ಕೆ
ವಿಜಯ ಕುಮಾರ್.ಎಂ
ಸಿದ್ದೇಶ್.ಕೆ
ತೃಪ್ತಿ ಪೆರ್ಲಾಮು

## ಮಾರ್ಗದರ್ಶನ

ಡಾ.ನಿತ್ಯಾ ವಾಸುದೇವನ್
ಜನಾರ್ದನ ಕೆಸರಗದ್ದೆ
ಮಂಜುಳ ಸುನಿಲ್
ಹೊಳೆಯಪ್ಪ ಕೆ ಸಾಕ್ಯ

## ಬರವಣಿಗೆ

ಮಂಜುಳ ಸುನಿಲ್
ಪವಿತ್ರ ಜ್ಯೋತಿಗುಡ್ಡೆ
ಹೊಳೆಯಪ್ಪ ಕೆ ಸಾಕ್ಯ
ಡಾ.ಶಾಲಿನಿ.ಆರ್

## ಸಂಪಾದನೆ ಮತ್ತು ಅಂತಿಮ ವರದಿ ಸಿದ್ಧಪಡಿಸುವಿಕೆ

ಡಾ.ಶಾಲಿನಿ.ಆರ್

## ಸಹಾಯ

ಶ್ರದ್ಧಾ ಎನ್‌ವಿ ಶರ್ಮ
ಡಾ.ಸವಿತಾ ಸುರೇಶ್ ಬಾಬು

## ಪರಿವಿಡಿ


1. ಪೀಠಿಕೆ ........ 6

2.ಅಧ್ಯಯನದ ಆಶಯ ........ 8

3.ಅಧ್ಯಯನದ ವ್ಯಾಪ್ತಿ ........ 8

4.ಅಧ್ಯಯನದ ಉದ್ದೇಶಗಳು ........ 8

ಎ. ಚಟುವಟಿಕೆಯ ಉದ್ದೇಶ ........ 8

ಬಿ. ಸಂಶೋಧನೆಯ ಉದ್ದೇಶ ........ 8

5.ಸಂಶೋಧನಾ ವಿಧಾನ ........ 9

6.ಸಂಶೋಧನಾ ತಂಡದ ಸದಸ್ಯರ ಅನಿಸಿಕೆ ........ 9

7.ಅಧ್ಯಯನದಲ್ಲಿ ಸಿಕ್ಕ ಒಳನೋಟಗಳು ........ 10

- ಅಂತರ್ಜಾತಿ, ಅಂತರ್ ಧರ್ಮಿಯ ಗೆಳೆತನದ ಕುರಿತು ಯುವಜನರ ಅಭಿಪ್ರಾಯ ........ 10
- ಯುವಜನರು ಜಾತಿ ಧರ್ಮವನ್ನು ಮೀರಿ ಪ್ರೇಮವಿವಾಹ ಇಷ್ಟ ಪಡದಿರಲು ಕಾರಣ ........ 10

ಚಿತ್ರದುರ್ಗ ........ 10

ದಕ್ಷಿಣ ಕನ್ನಡ ........ 11

8.ದತ್ತಾಂಶ ಸಂಗ್ರಹ ಮತ್ತು ವಿಶ್ಲೇಷಣೆ ........ 14

9. ಅಂತರ್ಜಾತಿ ಮತ್ತು ಅಂತರ್ ಧರ್ಮಿಯ ಮದುವೆಯಾದವರ ಸಂದರ್ಶನಗಳು ........ 17

- ಗಡಿಯಾಚೆಗಿನ ಮದುವೆಯ ಅನಿಶ್ಚಿತತೆ ಮತ್ತು ಶಿಕ್ಷೆಯ ಭಯ ........ 18
- ಸಾಮಾಜಿಕ ಬಹಿಷ್ಕಾರ ........ 20
- ಕೆಳ ಮತ್ತು ಮೇಲು ಜಾತಿಯ ಮದುವೆಗಳ ಅನುಭವ ........ 22
- ಕುಟುಂಬಕ್ಕೆ ಅವಮಾನವಾಗುವ ಭಯ ........ 23
- ಜಾತಿ ಮತ್ತು ಧರ್ಮದ ಸ್ವೀಕಾರ ........ 24
- ಕುಟುಂಬದ ಸ್ವೀಕಾರ ಮತ್ತು ಬೆಂಬಲ ........ 24
- ಆರ್ಥಿಕ ಮತ್ತು ಬದುಕುವ ಸ್ವಾತಂತ್ರ್ಯ ........ 25
- ದಂಪತಿಗಳ ನಡುವಿನ ಅನ್ಯೋನ್ಯತೆ ........ 26
- ತಾಯಿ ಸ್ವಲ್ಪ ಭಿನ್ನ ........ 26

- ಸಾಂಸ್ಕೃತಿಕ ಭಿನ್ನತೆ ಮತ್ತು ಆಹಾರ ಸಂಸ್ಕೃತಿ........................................................................... 27

**10.ಶಿಫಾರಸುಗಳು ........................................................................................... 28**

**11.ಸಾಮಾಜಿಕ ಹೊರಾಟಗಾರರ ಅನುಭವ ........................................................................ 29**

- ವಾಣಿ ಪೆರಿಯೋಡಿ– ಬರಹಗಾರ್ತಿ ಮತ್ತು ಸಾಮಾಜಿಕ ಹೋರಾಟಗಾರ್ತಿ.......................................................... 29
- ಉಮಾಶಂಕರ್ ಪೆರಿಯೋಡಿ– ಮುಖ್ಯಸ್ಥರು, ಅಜೀಂ ಪ್ರೇಮ್‌ಜೀ ಫೌಂಡೇಷನ್, ಬೆಂಗಳೂರು ............................. 29
- ರೇಖಾಂಭ– ಸಂಗೀತ ಕಲಾವಿದೆ, ಸಾಮಾಜಿಕ ಹೊರಾಟಗಾರ್ತಿ, ಶಿವಮೊಗ್ಗ .................................................... 29
- ಭೂಮಿ ಗೌಡ– ನಿವೃತ್ತ ಪ್ರಾಧ್ಯಾಪಕರು, ಮಂಗಳೂರು............................................................................ 30

**12. ಉಪಸಂಹಾರ ........................................................................................... 30**

**13.ಗ್ರಂಥಋಣ:............................................................................................... 33**

**14.ಅಡಕಗಳು ................................................................................................. 34**

ಪ್ರಶ್ನಾವಳಿ........................................................................................................... 34

## 1. ಪೀಠಿಕೆ

ಪ್ರೀತಿ, ಪ್ರೇಮ, ಪ್ರಣಯ, ಮದುವೆ ಇತ್ಯಾದಿ ಪದಗಳು ಯುವಜನರಿಗೆ ಮುದನೀಡುವ ಪದಪುಂಜಗಳು. ಯಾವುದೇ ಕಲಾ ಪ್ರಕಾರಗಳನ್ನು ತೆಗೆದುಕೊಂಡರೂ ಅದರಲ್ಲಿ ಪ್ರೇಮ, ಪ್ರೀತಿ ಎನ್ನುವ ಹೂರಣವಿದ್ದರೆ ಅದಕ್ಕೆ ಬೇಡಿಕೆ ಜಾಸ್ತಿ. ಪದಗಳಲ್ಲಿ ಹಿಡಿದಿಡಲಾಗದ ಅನ್ಯೂನ್ಯವಾದ ಮೌಲ್ಯವೇ ಪ್ರೀತಿ, ಪ್ರೇಮ. ಜಗತ್ತಿಗೆ ತೀರ ಅಗತ್ಯವಾದ ಮತ್ತು ಬದುಕು ಕಟ್ಟುವಿಕೆಯ ಪ್ರಕ್ರಿಯೆಯೊಂದು ಜಾತಿ–ಧರ್ಮದಂತಹ ಗೋಡೆಗಳ ನೆಪದಲ್ಲಿ ನಲುಗಿಹೋಗುತ್ತಿರುವುದು ಈಗಿನಕಾಲದ ವಿಪರ್ಯಾಸ. ಪ್ರೌಢ ಜೀವಗಳು ಪರಸ್ಪರ ಆಕರ್ಷಣೆಯಾಗುವುದು, ಜತೆಗೆ ಬದುಕು ಕಟ್ಟಿಕೊಳ್ಳಬೇಕೆಂದು ಬಯಸುವುದು ನಿಸರ್ಗದ ನಿಯಮ. ಅಲ್ಲದೇ ತಮಗಿಷ್ಟವಾದ, ತಮ್ಮ ಮನಸ್ಸಿಗೆ ಒಪ್ಪುವ ಸಂಗಾತಿಯ ಆಯ್ಕೆ ವಿಶ್ವ ಸಂಸ್ಥೆ ಘೋಷಿಸಿದ ಮಾನವ ಹಕ್ಕುಗಳಲ್ಲೇ ಒಂದಾಗಿದೆ. ಭಾರತದ ಸಂವಿಧಾನದಲ್ಲೂ ಸಂಗಾತಿಯ ಆಯ್ಕೆಯ ಹಕ್ಕು 21 (ವ್ಯಕ್ತಿಸ್ವಾತಂತ್ರ್ಯ ಮತ್ತು ಬದುಕಿನ ಸ್ವಾತಂತ್ರ್ಯದ ಬಗ್ಗೆ ಹೇಳುತ್ತದೆ) ವಿಧಿಯ ಮೂಲಕ ಹಕ್ಕಾಗಿದೆ. ಹೀಗಿದ್ದರೂ ಈ 21ನೇ ಶತಮಾನದಲ್ಲೂ ಭಾರತದಲ್ಲಿ ಅದರಲ್ಲೂ ಕರ್ನಾಟಕದಲ್ಲಿ ಪ್ರೇಮವಿವಾಹಕ್ಕೆ ಅಡ್ಡಿಪಡಿಸುವ ದೊಡ್ಡಗೋಡೆಗಳು ಜಾತಿ ಮತ್ತು ಧರ್ಮ ಎನ್ನುವ ಸತ್ಯ, ಭಾರತದ ಯುವಜನತೆಗೆ ನೋವಿನ ವಿಷಯ.

ಅಂತರ್ಜಾತಿಯ ಮದುವೆಯಾದರೆಂದೋ, ಅಂತರ್ ಧರ್ಮೀಯ ಮದುವೆಯಾದರು ಎಂಬ ಕಾರಣಕ್ಕಾಗಿ ಯುವ ಪ್ರೇಮಿಗಳನ್ನು ಪೋಷಕರೇ ಮರ್ಯಾದೆ ಹತ್ಯೆ ಮಾಡುವುದು, ಧರ್ಮ ರಕ್ಷಣೆಯ ಹೆಸರಿನಲ್ಲಿ ಯಾವುದೋ ಸಂಘಟನೆಯವರು ಯುವ ಜೋಡಿಗಳಿಗೆ ಬೆದರಿಕೆಯೊಡ್ಡುವುದು, ಹಲ್ಲೆ ಮಾಡುವುದು, ಸಮಾಜದಿಂದ ಬಹಿಷ್ಕಾರ ಹಾಕುವುದು, ನೀರು, ದಾರಿ ಎಂಬ ಮೂಲಭೂತ ಅವಶ್ಯಕತೆಗಳನ್ನು ನಿರಾಕರಿಸುವುದು, ಉದ್ಯೋಗದಿಂದ ತೆಗೆದುಹಾಕುವುದು, ಬಾಡಿಗೆಗೆ ಮನೆ ನೀಡದಿರುವುದು, ಕುಟುಂಬದಿಂದ ಬಹಿಷ್ಕಾರ ಹೀಗೆ ನಾವು ದಿನನಿತ್ಯ ಒಂದಲ್ಲ ಒಂದು ರೂಪದಲ್ಲಿ ಇಂತಹ ಘಟನೆಗಳನ್ನು ಕೇಳುತ್ತಲೇ ಇರುತ್ತೇವೆ. 46ರ ಅವಿವಾಹಿತೆ ಮಹಿಳೆಯೊಬ್ಬಳು, ಒಂದು ಸಂದರ್ಭದಲ್ಲಿ ಹೇಳಿಕೊಂಡಿದ್ದರು, "ತಾನು ತನ್ನ ಹರೆಯದಲ್ಲಿ ಒರ್ವ ಕ್ರಿಶ್ಚಿಯನ್ ಹುಡುಗನನ್ನು ಪ್ರೇಮಿಸಿದ್ದೆ. ಆದರೆ ಮನೆಯವರು, ಧರ್ಮ ಬೇರೆಯಾದ ಕಾರಣ ಒಪ್ಪಲಿಲ್ಲ. ಮನೆಯವರ ಹಠ, ಅಳು, ನೋವು, ನೋಡಿ, ತಾನು ಮದುವೆಯಾಗುವುದಿಲ್ಲವೆಂದು ಹೇಳಿದೆ. ಆಗ ಮನೆಯವರು ತಮ್ಮಮನೆಯ ಮರ್ಯಾದೆ ಉಳಿಯಿತು ಎಂದು ನೆಮ್ಮದಿಯ ಉಸಿರು ಬಿಟ್ಟಿದ್ದರು. ಆತನೂ ಬೇರೆ ಮದುವೆ ಆಗಲಿಲ್ಲ. ನನ್ನಂತೆಯೇ ಒಂಟಿಯಾಗಿದ್ದಾನೆ. ಇಬ್ಬರ ಸಹೋದರ, ಸಹೋದರಿಯರು ಮದುವೆಯಾಗಿ ಬದುಕು ಕಟ್ಟಿಕೊಂಡರು. ಅಡ್ಡಿ ಪಡಿಸಿದ ಪೋಷಕರೂ ಈಗ ಕೊರಗುತ್ತಿದ್ದಾರೆ". ಈ ವಿರಹದ, ನೋವಿನ ಕತೆ ಕೇಳುವಾಗ ಮನಸ್ಸು ಭಾರವಾಗುತ್ತದೆ.

ಇಂತಹ ಎಷ್ಟೋ ಕತೆಗಳು ಇರಬಹುದು. ಧರ್ಮ, ಜಾತಿಯ ಅಡ್ಡಿಯೊಂದು ಇಲ್ಲದೇ ಇದ್ದರೆ ಎನ್ನುವ ಪ್ರಪಂಚವೊಂದನ್ನು ನಮ್ಮ ಮನಸ್ಸು ಸದಾ ಕನಸು ಕಾಣುತ್ತದೆ. ರಾಜ್ಯದ ಇತರ ಭಾಗಗಳಿಗೆ ಹೋಲಿಸಿದರೆ ಕರಾವಳಿ ಭಾಗದ ಸಾಮಾಜಿಕ ವಾತಾವರಣ ಅದರಲ್ಲೂ ಜಾತಿ ಮತ್ತು ಧರ್ಮಗಳ ವಿಷಯದಲ್ಲಿ ಅತೀ ಸೂಕ್ಷ್ಮವಾಗಿರುವುದು ಇಲ್ಲಿ ವಾಸಿಸುವ ಪ್ರತಿಯೊಬ್ಬರ ಅನುಭವಕ್ಕೆ ಬಂದಿರುವುದು ಸುಳ್ಳಲ್ಲ. ನಮ್ಮ ಹಿರಿಯರು ಕೋಮು ಸೌಹಾರ್ದದಿಂದ ಬಾಳಿ ಬದುಕ ಬೇಕಾದಷ್ಟು ನಿದರ್ಶನಗಳು, ಇತಿಹಾಸಗಳು, ದೈವ ದೇಗುಲಗಳು ಇವೆ. ಕರ್ನಾಟಕದಲ್ಲಿ ಅದರಲ್ಲೂ ದಕ್ಷಿಣ ಕನ್ನಡದಲ್ಲೇ ಬೇಕಾದಷ್ಟು ಇವೆ. ಮತ್ತೆ ಅವು ಜನರಿಗೆ ಗೊತ್ತೇ ಇದೆ. ಆದರೂ ಈ ಗೋಡೆಗಳನ್ನು ಒಡೆಯುವ ಪ್ರಯತ್ನ ಮಾತ್ರ ಬಹಳ ಕ್ಷೀಣವಾಗಿದೆ. ಯಾವುದೇ ಕಾರಣಕ್ಕೂ ಜಾತಿ, ಧರ್ಮ, ಬಣ್ಣ, ವರ್ಗ, ಲಿಂಗದ ಹೆಸರಿನಲ್ಲಿ ತಾರತಮ್ಯ ಮಾಡಬಾರದು, ಹಿಂಸೆ ಮಾಡಬಾರದು, ಯಾವುದೇ ಮೂಲಭೂತ ಅವಶ್ಯಕತೆಗಳನ್ನು ತಡೆಹಿಡಿಯಬಾರದು ಎಂದು ಭಾರತದ ಸಂವಿಧಾನದಲ್ಲೇ ಬರೆದಿರಬಹುದು. ಆದರೆ ತಲತಲಾಂತರದಿಂದ ಆಚರಿಸಿಕೊಂಡ ಭಾರತೀಯರ ಸಂಕುಚಿತ ಮನಪಲ್ಲಟವಾಗಲು, ಜಾತಿ ಮತ್ತು ಧರ್ಮಗಳ ವಿಷವರ್ತುಲದಲ್ಲಿ ನಲುಗುತ್ತಿರುವ ಜನರ ಮನಸ್ಸುಗಳನ್ನು ಬದಲಾಯಿಸಲು, ಗಡಿಗಳನ್ನು ಮೀರಲು, ಸೌಹಾರ್ದತೆಯ ನಾಡನ್ನು ಕಟ್ಟಲು ಅಂತರ್ಜಾತೀಯ ಮತ್ತು ಅಂತರ್ ಧರ್ಮೀಯ ಮದುವೆಯಿಂದಲೇ ಸಾಧ್ಯ ಎನ್ನುವುದು ಈಗಿನ ಸತ್ಯ ಮತ್ತು

ತುರ್ತು. ಹಾಗಾಗಿ ಅಂತರ್ಜಾತಿ/ಅಂತರ್ ಧರ್ಮದ ಮದುವೆಯ ಕುರಿತು ಯುವಜನರಲ್ಲಿ ಇರುವ ತಲ್ಲಣ, ಒತ್ತಡ, ಸವಾಲುಗಳನ್ನು ಅರಿಯುವ ಮುಖ್ಯ ಉದೇಶದಿಂದ ಈ ಸಂಶೋಧನೆ ಕೈಗೊಳ್ಳಲಾಗಿದೆ.

ಭಾರತದ ಇತಿಹಾಸದ ಗತವೈಭವದಲ್ಲಿ ಕಪ್ಪು ಚುಕ್ಕೆಯಂತೆ ಕಾಣುವ ಕೆಲವು ಸಮಸ್ಯೆಗಳಲ್ಲಿ ಜಾತಿ ವ್ಯವಸ್ಥೆಯ ಸಮಸ್ಯೆಯೂ ಒಂದು. ವಿವಾಹವು ಮಾನವನ ವೈವಾಹಿಕ ಸಂಬಂಧದ ಒಂದು ಸಾಂಸ್ಥಿಕ ರೂಪ. ಜಾತಿ ಧರ್ಮಗಳು ಕೂಡ ಮಾನವನ ಸಾಮಾಜಿಕ ಜೀವನದ ಸಂಸ್ಥೆ. ಇವುಗಳ ನಡುವಿನ ಸಂಬಂಧ ಏನು ಎನ್ನುವ ಪ್ರಶ್ನೆ ನಮಗೆ ಕಾಡುತ್ತದೆ. ಅಂಬೇಡ್ಕರ್‌ರವರು ಹೇಳುವಂತೆ " ಸ್ವಜಾತಿ ವಿವಾಹವೇ ಏಕೈಕ ಜಾತಿಯ ಲಕ್ಷಣವಾಗಿದೆ. **ಭಾರತದಲ್ಲಿ ಜಾತಿಯೆಂದರೆ ಸ್ವಜಾತಿ ಮದುವೆಯ ಅಚರಣೆಯೊಂದಿಗೆ ಅಂತರ್ಜಾತಿ ವಿವಾಹವನ್ನು ನಿಷೇಧಿಸುತ್ತ ಒಂದು ಗುಂಪು ಇನ್ನೊಂದರೊಡನೆ ಸಮ್ಮಿಳಿತವಾಗದಂತೆ ತಡೆಯುವ ಮೂಲಕ ಒಟ್ಟು ಜನಸಂಖ್ಯೆಯನ್ನು ಸ್ಥಿರ ಮತ್ತು ನಿರ್ದಿಷ್ಟ ಘಟಕಗಳ ನಡುವೆ ಕೃತಕವಾಗಿ ಕತ್ತರಿಸಿ ಹಂಚುವ ಪ್ರಕ್ರಿಯೆ"** ಎಂದು ಅಭಿಪ್ರಾಯಪಟ್ಟಿದ್ದಾರೆ. ಈ ಹೇಳಿಕೆಯಿಂದ ನಮಗೆ ಸ್ಪಷ್ಟವಾಗುವುದು ಜಾತೀಯತೆಯ ಮುಖ್ಯಲಕ್ಷಣ ಅದು ಸ್ವಜಾತಿ ವಿವಾಹ. ಆದ್ದರಿಂದ ಅಂತರ್ಜಾತಿ ವಿವಾಹವನ್ನು ಅದು ನಿಷೇಧಿಸಿದ ಕಾರಣ ಜಾತಿಯು ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿದೆ. ಇದರಿಂದಾಗಿ ನಾವು ಜಾತಿ ಮತ್ತು ಜಾತಿವ್ಯವಸ್ಥೆಯನ್ನು ಭಾರತ ದೇಶದ ಒಂದು ಸಮಸ್ಯೆಯೆಂದು ಭಾವಿಸುವುದಾದರೆ ಅದಕ್ಕೆ ಪರಿಹಾರವಾಗಿ ಅಂತರ್ಜಾತಿ ವಿವಹವನ್ನು ನೋಡಬಹುದಾಗಿದೆ. ಹಾಗೂ ಸ್ವಜಾತಿ ವಿವಾಹಕ್ಕೆ ಉತ್ತರ ಎನ್ನುವಂತೆ ಅಂತರ್ಜಾತಿ ವಿವಾಹವಾಗಿರುತ್ತದೆ.

ಭಾರತದಲ್ಲಿ ಜಾತಿ, ಧರ್ಮ ವ್ಯವಸ್ಥೆಯ ಕರಾಳ ಪ್ರದರ್ಶನ ಎಲ್ಲಾ ಧರ್ಮಗಳನ್ನು ಅನುಸರಿಸುವ ಜನರ ಸಾಮಾಜಿಕ ಜೀವನದಲ್ಲಿ ಕಂಡುಬರುತ್ತಿವೆ. ಅದು ಯಾವ ಮಟ್ಟದಲ್ಲಿ ಎಂದರೆ ಪ್ರಪಂಚದಲ್ಲಿ **ಆನರ್ ಬೇಸ್ಡ್ ವಯೋಲೆನ್ಸ್ ಅವೇರ್‌ನೆಸ್ ನೆಟ್‌ವರ್ಕ್** ಪ್ರಕಾರ **'**ವರ್ಷಕ್ಕೆ 5000 ಮರ್ಯಾದೆ ಹತ್ಯೆಗಳು ನಡೆದರೆ ಭಾರತ ದೇಶದಲ್ಲಿಯೇ ವರ್ಷಕ್ಕೆ 1000 ಮರ್ಯಾದೆ ಹತ್ಯೆಗಳು ನಡೆಯುತ್ತಿವೆ**'**.

ಹಿಂದು ಸಮಾಜದಲ್ಲಿ ಪುರಾಣಗಳಲ್ಲಿ ಮತ್ತು ಹಿಂದುಗಳು ಪೂಜಿಸಲ್ಪಡುವ ಕೆಲವು ದೇವರುಗಳು ಜಾತಿ ಧರ್ಮದ ಗೋಡೆಗಳನ್ನು ದಾಟಿ ವಿವಾಹವಾಗಿರುವ ಉಲ್ಲೇಖಗಳು ಇವೆ. ಊದಾಹರಣೆಗೆ ನಂಜನಗೂಡಿನ ನಂಜುಡ–ಮೈಸೂರಿನ ಚಾಮುಂಡಿ, ಆದಿಚುಂಚನ ಗಿರಿಯ ಭೈರವೇಶ್ವರ–ಕುರುಬತಿ ಗಂಗೆಮಾಳವ್ವ, ಮೈಲಾರದ ಮೈಲಾರ ಲಿಂಗ – ಕುರುಬತ್ತಿ ಮಾಳವ್ವ, ಬಿಳಿಗಿರಿ ರಂಗನಾಥ – ಲಕ್ಕಮ್ಮ ಎಲ್ಲವೂ ಸಹ ಜಾತಿಯನ್ನು ಮೀರಿದ ಉದಾಹರಣೆಗಳು. ಧರ್ಮವನ್ನೂ ಮೀರಿದ ದೇವರುಗಳು ಇದ್ದಾರೆ ಅದು ಮೇಲುಕೋಟೆಯ ಚೆಲುವ ನಾರಾಯಣ – ದಿಲ್ಲಿಯಾ ಬಾದ್‌ಶಹನ ಮಗಳು ಬೀಬಿ ನಲ್ಚಿಯರ್ (ವರನಂದಿ) ರೊಂದಿಗಿನ ಪ್ರೇಮ ವಿವಾಹ. ಈ ಎಲ್ಲಾ ವಿವಾಹಗಳು ಸಹ ಜಾತಿ, ಧರ್ಮದ ಗೋಡೆಯನ್ನು ಮೀರಿದ ಮದುವೆಗಳು. ಈ ಕಾರಣಕ್ಕೂ ಕೆಲವು ದೇವರಿಗೆ ಶಿಕ್ಷೆಯಾಗಿರುವುದನ್ನು ಕಾಣಬಹುದು. ಮಾರಮ್ಮ ದೇವರಿಗೆ ಕೋಣ ಬಲಿಕೊಡುವುದು ಜಾತಿ ಮೀರಿ ವಿವಾಹವಾದ ಕಾರಣಕ್ಕೆ ಎಂಬ ನಂಬಿಕೆಯೂ ಇದೆ. ದೇವರುಗಳ ಅಂತರ್ಜಾತಿ ವಿವಾಹದ ಕಾರಣಕ್ಕಾಗಿಯೂ ಬೇರೆ ಬೇರೆ ಜಾತಿ ಜನರು ಅವರನ್ನು ಪೂಜಿಸಲ್ಪಡುತ್ತಿರಬಹುದು. ಜಾತಿಯನ್ನು ಮೀರಿದ ಸಮಾಜವನ್ನು ಕಟ್ಟಲು ನಡೆದಿರಲೂಬಹುದು ಜೊತೆಗೆ ಅಂದು ಜಾತಿಯ ಬಿಕ್ಕಟ್ಟು ಅಷ್ಟಾಗಿ ಇಲ್ಲದಿರಬಹುದು.

ಆದರೆ ಇಂದಿನ ಯುವ ಮನಸ್ಸುಗಳಿಗೆ ಲವ್ ಸ್ಟೋರಿ ಸಿನಿಮಾಗಳೇ ಇಷ್ಟ, ರೋಮಿಯೋ ಜೂಲಿಯೆಟ್‌ರ ನಾಟಕಗಳೇ ಮನಸ್ಸಿಗೆ ಮುದ. ಅವರು ಪ್ರೀತಿ ಪ್ರೇಮಕ್ಕೆ ಅತ್ಯಂತ ಮಹತ್ವದ ಸ್ಥಾನವನ್ನು ನೀಡಿದ್ದಾರೆ. ಆದಕ್ಕೆ ಹಿಂಸಾಚಾರಗಳ ನಡುವೆಯೂ ಯುವಜನರಲ್ಲಿ ಅಂತರ್ಜಾತಿ, ಧರ್ಮದ ಪ್ರೀತಿ–ಪ್ರೇಮಗಳಿಗಾಗಿ ಹಂಬಲಿಸುತ್ತಾರೆ. ಅಂತಹ ಮದುವೆಯಾಗುವವರಿಗೆ ಘನತೆಯಿಂದ ಬದುಕಲು ಅನುವು ಮಾಡಿಕೊಡೋಣ. ಕೊನೆಯದಾಗಿ ಸಮಾಜದ ಬದಲಾವಣೆಗಾಗಿ ಮುಂದೆ ಪ್ರೀತಿ ಪ್ರೇಮದ ವಿವಾಹವಾಗುವಂತವರಿಗೆ ಈ ಸಂಶೋಧನೆಯು ಒಂದು ಭರವಸೆಯ ಹಣತೆಯಾಗಲಿ ಎಂದು ನಂಬುತ್ತೇವೆ.

## 2.ಅಧ್ಯಯನದ ಆಶಯ

ಜಾಗತೀಕರಣ, ಅಭಿವೃದ್ಧಿ, ಆಧುನಿಕ ಶಿಕ್ಷಣ ನೀತಿ, ವಿಜ್ಞಾನ, ಹೀಗೆ ಎಂತೆಂಥಹ ಗಾಳಿ ಬೀಸಿದರೂ ಭಾರತದಲ್ಲಿ ಇನ್ನೂ ವರ್ಗ, ಜಾತಿ, ಧರ್ಮಗಳ ನಡುವಿನ ತಾರತಮ್ಯ, ಅಸಹನೆ, ದ್ವೇಷ, ದಳ್ಳೂರಿ ಕೊತಕೊತವೆನ್ನುತ್ತಿರುವುದು ತಿಳಿದಿರುವ ವಿಚಾರ. ಜೊತೆಗೆ ಮಾರ್ಯದೆ ಹತ್ಯೆ, ಕೊಮುಗಲಭೆ, ಇತ್ಯಾದಿ ವಿಷಯಗಳು ನಮ್ಮನ್ನು ಇನ್ನಷ್ಟೂ ಭಯಗೊಳಿಸುತ್ತದೆ. ಅಂತಹ ಘಟನೆಗಳು ಜನಸಮಾನ್ಯರ ಎದೆ ನಡುಗಿಸುತ್ತದೆ. ಬದುಕು ದುರ್ಬರವೆನಿಸುತ್ತದೆ. ಇಂತಹ ಸಂದರ್ಭದಲ್ಲಿ ಯುವಜನರ ಆಲೋಚನೆಗಳನ್ನು ಅರಿಯುವುದು ಮತ್ತು ಅವರ ಅಭಿಪ್ರಾಯಗಳನ್ನ ಸಂಗ್ರಹಿಸುವುದು ಅತೀ ಮುಖ್ಯವೆನಿಸಿ ಈ ಸಂಶೋಧನೆ ಕೈಗೊಳ್ಳಲಾಗಿದೆ.

ನಮ್ಮ ಸಂವಿಧಾನದಲ್ಲಿ ಯಾವುದೇ ಕಾರಣಕ್ಕೂ ಜಾತಿ, ಧರ್ಮ, ವರ್ಗ, ಬಣ್ಣ, ಲಿಂಗದ ಹೆಸರಿನಲ್ಲಿ ತಾರತಮ್ಯ ಮಾಡಬಾರದು, ಹಿಂಸೆ ಮಾಡಬಾರದು, ಯಾವುದೇ ಮೂಲಭೂತ ಅವಶ್ಯಕತೆಗಳನ್ನು ತಡೆಹಿಡಿಯಬಾರದು ಎಂದು ಬರೆದಿದೆ. ಆದರೆ ತಲತಲಾಂತರಗಳಿಂದ ಆಚರಿಸಿಕೊಂಡು ಬಂದ ಭಾರತೀಯರ ಸಂಕುಚಿತ ಮನಃಪಲ್ಲಟವಾಗಲು, ಜಾತಿ ಮತ್ತು ಧರ್ಮಗಳ ವಿಷವರ್ತುಲದಲ್ಲಿ ನಲುಗುತ್ತಿರುವ ಜನರ ಮನಸ್ಸುಗಳನ್ನು ಬದಲಾಯಿಸಲು, ಗಡಿಗಳನ್ನು ಮೀರಲು, ಸೌಹಾರ್ದತೆಯ ನಾಡನ್ನು ಕಟ್ಟಲು ಅಂತರ್ಜಾತೀಯ ಮತ್ತು ಅಂತರ್ ಧರ್ಮಿಯ ಮದುವೆಯಿಂದಲೇ ಸಾಧ್ಯವೆನ್ನುವುದು ಈಗಿನ ಸತ್ಯ ಮತ್ತು ತುರ್ತು. ಹಾಗಾಗಿ ಅಂತರ್ಜಾತಿ/ ಅಂತರ್ ಧರ್ಮದ ಮದುವೆಯ ಕುರಿತು ಯುವಜನರಲ್ಲಿ ಇರುವ ತಲ್ಲಣ, ಒತ್ತಡ, ಸವಾಲುಗಳನ್ನು ಅರಿಯುವುದೇ ಈ ಅಧ್ಯಯನದ ಆಶಯವಾಗಿದೆ.

## 3.ಅಧ್ಯಯನದ ವ್ಯಾಪ್ತಿ

ಆಧುನಿಕ ಜಗತ್ತಿನಲ್ಲಿ ಅಂತರ್ಜಾತಿ ಮತ್ತು ಅಂತರ್ ಧರ್ಮೀಯ ವಿವಾಹಗಳ ಬಗ್ಗೆ ಯುವ ಮನಸ್ಸಿನ ಗೊಂದಲ, ಆತಂಕ ಮತ್ತು ಭಯ, ತಲ್ಲಣ ಹಾಗೂ ಅವರ ನಿಲುವುಗಳೇನು ಎಂಬ ಕುತೂಹಲಗಳನ್ನು ತಿಳಿಯುವ ಮತ್ತು ಅದನ್ನು ದಾಖಲಿಸುವ ನಿಟ್ಟಿನಲ್ಲಿ ಕಿರು ಸಂಶೋಧನೆಯನ್ನು ಕೈಗೊಳ್ಳಲಾಗಿದೆ. ಇದಕ್ಕೆ ಕರ್ನಾಟಕದ ಚಿತ್ರದುರ್ಗ ಜಿಲ್ಲೆ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಯುವಜನತೆಯ ಮನಸ್ಥಿತಿಯನ್ನು ಅರಿಯಲು ಸಂದರ್ಶನ ಮತ್ತು ಪ್ರಶ್ನಾವಳಿಯ ಮೂಲಕ ಅಭಿಪ್ರಾಯ ಸಂಗ್ರಹಿಸಲಾಗಿದೆ.

## 4.ಅಧ್ಯಯನದ ಉದ್ದೇಶಗಳು

### ಎ. ಚಟುವಟಿಕೆಯ ಉದ್ದೇಶ

1. ಸಂಶೋಧನೆಯ ಚಟುವಟಿಕೆ ಮೂಲಕ ಅರಿವು ಪಡೆಯುವುದು.

### ಬಿ. ಸಂಶೋಧನೆಯ ಉದ್ದೇಶ

1. ಕೋಮು ಸೌಹಾರ್ದತೆಗೆ/ ಜಾತ್ಯಾತೀತತೆಗೆ ಅಂತರ್ಜಾತಿಯ, ಅಂತರ್ ಧರ್ಮೀಯ ಮದುವೆಗಳು ಸಹಕಾರಿಯೇ ಮತ್ತು ಅಂತಹ ಮದುವೆಗಳ ಸವಾಲುಗಳನ್ನು ಅರ್ಥಮಾಡಿಕೊಳ್ಳುವುದು.
2. ಯುವಜನರಲ್ಲಿ ಪ್ರೇಮ ವಿವಾಹಕ್ಕಿರುವ ನಿಲುವುಗಳೇನು ಎಂಬುದನ್ನು ಅರಿಯುವುದು.

3. ಯುವಜನರಲ್ಲಿ ಅಂತರ್ಜಾತಿ ಮತ್ತು ಅಂತರ್ ಧರ್ಮೀಯ ಮದುವೆಯ ಕುರಿತಾಗಿ ಇರುವ ಅಭಿಪ್ರಾಯಗಳನ್ನು ಅರಿತುಕೊಳ್ಳುವುದು.

## 5.ಸಂಶೋಧನಾ ವಿಧಾನ

ಕರ್ನಾಟಕದ ಚಿತ್ರದುರ್ಗ ಮತ್ತು ದಕ್ಷಿಣ ಕನ್ನಡ ಈ ಎರಡು ಜಿಲ್ಲೆಗಳನ್ನು ಆಯ್ಕೆ ಮಾಡಿಕೊಂಡು ಸುಮಾರು 25 ಪ್ರಶ್ನಾವಳಿಗಳನ್ನು ಒಳಗೊಂಡು 18 ರಿಂದ 29ರ ವಯೋಮಾನದ ಒಟ್ಟು 198 ಅವಿವಾಹಿತ ಯುವಜನರನ್ನು ಸಮೀಕ್ಷೆಯ ಮೂಲಕ ಅಭಿಪ್ರಾಯ ಸಂಗ್ರಹಿಸಲಾಗಿದೆ. ಅದರಲ್ಲಿ ಗ್ರಾಮೀಣ, ನಗರ, ಉದ್ಯೋಗಸ್ಥ–ಉದ್ಯೋಗರಹಿತ, ಬಡವ–ಮಧ್ಯಮ ವರ್ಗದ, ತಳ–ಮಧ್ಯಮ ಹಾಗೂ ಉನ್ನತ ಜಾತಿಗಳು ಸೇರಿದಂತೆ ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ ಧರ್ಮಗಳ ಯುವಜನರನ್ನು ಸಂದರ್ಶಿಸಿ ಮಾಹಿತಿ ಪಡೆಯಲಾಗಿದೆ. ಅಂತೆಯೇ ಅಂತರ್ಜಾತಿ, ಧರ್ಮದಲ್ಲಿ ಪ್ರೇಮ ವಿವಾಹವಾದ ಆಯ್ದ 11 ಜನರನ್ನು ನೇರ ಸಂದರ್ಶನದ ಮೂಲಕ ಒಪ್ಪಿಗೆಯ ಮೇರೆಗೆ ಲಿಖಿತ ಮಾದರಿಯಲ್ಲಿ ಸಂಗ್ರಹಿಸಲಾಗಿದೆ. ಈ ದಂಪತಿಗಳಲ್ಲಿ ಚಿತ್ರದುರ್ಗದ 5 ಜೋಡಿ ಮತ್ತು ದಕ್ಷಿಣಕನ್ನಡ ಜಿಲ್ಲೆಯ 6 ಜೋಡಿಯ ಸಂದರ್ಶನವನ್ನು ಮಾಡಲಾಗಿದೆ. ಅದರಲ್ಲಿ ಹಿಂದುಳಿದ, ಅಲ್ಪಸಂಖ್ಯಾತ, ಮೇಲ್ಜಾತಿಯೆನಿಸಿಕೊಂಡ ಯುವಜನರೂ ಇದ್ದಾರೆ.

ಈ ಕಿರು ಸಂಶೋಧನೆಯ ದತ್ತಾಂಶ ಸಂಗ್ರಹಣೆಯಲ್ಲಿ ಒಟ್ಟು 6 ಯುವಜನರು ಸಂಶೋಧನಕಾರರಾಗಿ ಭಾಗವಹಿಸಿದ್ದಾರೆ. ಅದರಲ್ಲಿ ಮೂವರು ಯುವತಿಯರು ಮತ್ತು ಮೂವರು ಯುವಕರಿದ್ದಾರೆ.

## 6.ಸಂಶೋಧನಾ ತಂಡದ ಸದಸ್ಯರ ಅನಿಸಿಕೆ

- ಅಧ್ಯಯನ ಮಾಡುವ ಅವಕಾಶವೇ ಖುಷಿಯಾಗಿತ್ತು.
- ಅಧ್ಯಯನ ಶುರು ಮಾಡುವ ಪೂರ್ವ ತಯಾರಿಯ ಶಿಬಿರಗಳು ನಮಗೆ ಅಧ್ಯಯನದ ರೂಪು–ರೇಷೆಯನ್ನು ಗುರುತಿಸುವುದು, ಉದ್ದೇಶಗಳನ್ನು, ವಿಧಾನಗಳನ್ನು ಕಂಡುಕೊಳ್ಳುವಾಗ ಬಹಳ ಕೆಲಸವಿದೆ ಎಂದೆನಿಸಿತು. ಬಹಳ ಥ್ರಿಲ್ ಅನಿಸಿತು.
- ಆದರೆ ಕ್ಷೇತ್ರದಲ್ಲಿ, ಕಾಲೇಜಿನಲ್ಲಿ ಯುವಜನರನ್ನು ಪ್ರಶ್ನಾವಳಿಗಳನ್ನು ಇಟ್ಟುಕೊಂಡು ಸಮೀಕ್ಷೆ ಮಾಡುವ ಸಂದರ್ಭದಲ್ಲಿ ಇದು ಪ್ರೇಮವಿವಾಹದ ಫಿಲಂ ನೋಡುವಷ್ಟು ಸುಲಭವಲ್ಲ. ಅಷ್ಟು ರಮ್ಯವಾಗಿಲ್ಲ. ಯುವಜನರಿಗೆ ಗಡಿಮೀರಿದ ಮದುವೆಯ ಕುರಿತು ಬಹಳಷ್ಟು ಭಯ, ತಲ್ಲಣಗಳು ನಮಗೆ ಸಂದರ್ಶನ ಮಾಡುವ ಮೊದಲೇ ಸಿಕ್ಕಿತು. ಕೆಲವರು ಬಹಳ ಪೊಲಿಟಿಕಲ್ ಆಗಿ ಉತ್ತರಿಸುವುದನ್ನು ಕಂಡಾಗ ನಾವು ಸಂದರ್ಶನ ಮಾಡುವಾಗ ಬಹಳ ತಟಸ್ಥವಾಗಿ ಇರುವುದರ ಅಗತ್ಯ ಎಂದು ಅರ್ಥವಾಯಿತು.
- ನಮ್ಮ ಹೆಸರು, ಕಾಲೇಜಿನ ಹೆಸರೆಲ್ಲ ಬರುವುದಿಲ್ಲವಲ್ಲ? ಎಂದು ಬಹಳ ಎಚ್ಚರಿಕೆಯಿಂದ ಯುವಜನರು ಕೇಳುತ್ತಿದ್ದರು. ಜಾತಿ, ಧರ್ಮದ ವಿಷಯವೆಂದಾಗ ಯುವಜನರಲ್ಲಿ ಅವರ ಯೋಚನೆಯನ್ನು ಹಂಚಿಕೊಳ್ಳಲು ಅವರಲ್ಲಿ ಭಯ ಇರುವುದು ಕೂಡ ನಮಗೆ ಅನುಭವವಾಯಿತು.
- ಈ ಅಧ್ಯಯನದಿಂದ ಏನು ಪ್ರಯೋಜನವೆಂದು ಯುವಜನರು ಕೇಳುತ್ತಿದ್ದರು. ಇದರಿಂದ ಏನು ಲಾಭ, ಇದಕ್ಕೆ ಯಾರು ಪ್ರಾಯೋಜಕತ್ವ ಮಾಡುತ್ತಿದ್ದಾರೆ? ಎಂಬೆಲ್ಲ ಪ್ರಶ್ನೆಗಳು ಬಂದವು.

- ಮಂಗಳೂರಿನಲ್ಲಿ ಅಂತರ್ ಧರ್ಮಿಯ ಮದುವೆಯಾದವರ ವಿಳಾಸ ದೂರವಾಣಿ ಪರಿಚತರಿಂದ ಶಿಫಾರಸು ಸಿಕ್ಕರೂ ಸರಳವಾದ ಸಂದರ್ಶನ, ಹೆಸರು ಬರುವುದಿಲ್ಲ ಎನ್ನುವ ಆಶ್ವಾಸನೆ ಕೊಟ್ಟರೂ 40ರ ಆಸುಪಾಸಿನ ದಂಪತಿಗಳು ಸಂದರ್ಶನಕ್ಕೆ ತಯಾರಾಗಲಿಲ್ಲ.
- ಒಟ್ಟಾರೆಯಾಗಿ ಈ ಅಧ್ಯಯನವು ನಮಗೆ ಸಂಶೋಧನೆಯ ಪ್ರಕ್ರಿಯೆಯನ್ನು ಅರ್ಥಮಾಡಿಕೊಳ್ಳಲು ಉತ್ತಮ ಅನುಭವವನ್ನೆ ನೀಡಿತು. ಜೊತೆಗೆ ಸಂಶೋಧನೆಯಿಂದ ಬಂದ ವರದಿಯನ್ನು ಕಂಡಾಗ ಖುಷಿ ಎನಿಸಿತು.

## 7.ಅಧ್ಯಯನದಲ್ಲಿ ಸಿಕ್ಕ ಒಳನೋಟಗಳು

ದಕ್ಷಿಣ ಕನ್ನಡ ಜಿಲ್ಲೆ ಮತ್ತು ಚಿತ್ರದುರ್ಗ ಎರಡು ಜಿಲ್ಲೆಯ ದತ್ತಾಂಶಗಳನ್ನು ಒಟ್ಟು ಹಾಕಲಾಗಿದೆ. ತುಲನಾತ್ಮಕ ಅಂಶಗಳು ಬೇಕೆನಿಸಿದಾಗ ಬೇರೆಬೇರೆಯಾಗಿ ನೋಡಿ ತಾಳೆ ಹಾಕಲಾಗಿದೆ. ಒಟ್ಟಿನಲ್ಲಿ ಅಧ್ಯಯನದ ಒಳನೋಟಗಳು ಹೀಗಿವೆ

- **ಅಂತರ್ಜಾತಿ, ಅಂತರ್ ಧರ್ಮಿಯ ಗೆಳೆತನದ ಕುರಿತು ಯುವಜನರ ಅಭಿಪ್ರಾಯ**

ಯುವಜನರು ತಮ್ಮ ಗೆಳೆಯ, ಗೆಳತಿಯರ ಆಯ್ಕೆಯಲ್ಲಿ ಬೇರೆ ಬೇರೆ ಜಾತಿ, ಧರ್ಮದವರ ನಡುವೆ ಆತ್ಮೀಯ ಸ್ನೇಹ ಇರುವವರು 194 (97%) ಯುವಜನರು ಹಾಗೂ 4 (2%) ಯುವಜನರು ಸ್ವಲ್ಪ ಕಡಿಮೆ ಗೆಳತನ ಇದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಈ ಅಂಕಿ ಅಂಶದಿಂದ ನಮಗೆ ಅರ್ಥವಾಗುದೇನೆಂದರೆ, ಅಂತರ್ಜಾತಿಯ ಮತ್ತು ಅಂತರ್ ಧರ್ಮೀಯ ಗೆಳೆತನ ಮಾಡುವುದರಲ್ಲಿ ಯುವಜನರಿಗೆ ಹೆಚ್ಚಿನ ಅಭ್ಯಂತರವಿಲ್ಲವೆನ್ನುವುದು ಸಮಾಧಾನಕರ ವಿಷಯ.

ಪ್ರೇಮದ ವಿಷಯಕ್ಕೆ ಬಂದಾಗ 154 (77%) ಯುವಜನರು ಪ್ರೇಮಿಸಬಹುದು ಎಂದರೆ 43 (21%) ಜನರು ಬೇಡವೆಂದು ಅಭಿಪ್ರಾಯಪಟ್ಟಿದ್ದಾರೆ.

ಹಾಗಾಗಿ ಈ ಅಂಕಿಅಂಶ ಗಮನಿಸಿದರೆ ಯುವಜನರಿಗೆ ಪ್ರೇಮದ ಮೇಲೆ ಒಲವಿದೆ. ತಮ್ಮ ವಯಕ್ತಿಕ ಮತ್ತು ಹತ್ತಿರದ ಕುಟುಂಬದವರ ವಿಷಯಕ್ಕೆ ಬಂದಾಗ ಅವರಿಗೆ ಕೆಲವು ಆತಂಕ, ಭಯ ಅವರನ್ನು ಕಾಡುತ್ತದೆ. ಅವುಗಳನ್ನು ಈ ಕೆಳಗಿನಂತೆ ಪಟ್ಟಿಮಾಡಬಹುದು.

- **ಯುವಜನರು ಜಾತಿ ಧರ್ಮವನ್ನು ಮೀರಿ ಪ್ರೇಮವಿವಾಹ ಇಷ್ಟ ಪಡದಿರಲು ಕಾರಣ**

**ಚಿತ್ರದುರ್ಗ**

- ಜಾತಿ ಕೆಡುತ್ತೆ.
- ಹಿಂದಿನಿಂದ ನಡೆದುಕೊಂಡು ಬಂದ ಸಂಪ್ರದಾಯವನ್ನು ಪಾಲಿಸುವುದು ಕಿರಿಯರ ಕರ್ತವ್ಯ.
- ಧರ್ಮಪಾಲನೆ ಮಾಡುವುದು ಯುವಜನರ ಕರ್ತವ್ಯ.
- ಮನೆಯಲ್ಲಿ ಒಪ್ಪಿಗೆ ಇಲ್ಲ ಮತ್ತು ನನಗೆ ಅಂತಹ ಮದುವೆಯಾಗಲು ಇಷ್ಟವಿಲ್ಲ.
- ಕಷ್ಟ ಬಂದರೆ ಫ್ಯಾಮಿಲಿ ಸಪೋರ್ಟ್ ಇರಲ್ಲ.
- ನಮ್ಮ ಜಾತಿ, ಧರ್ಮ ಬಿಟ್ಟು ಯಾಕೆ ಹೋಗಬೇಕು.

- ಜಾತಿ, ಧರ್ಮಕ್ಕೆ ಧಕ್ಕೆಯಾಗುವ ಕಾರಣ.
- ದೊಡ್ಡವರ/ಮನೆಯವರ ಮಾತಿಗೆ ಬೆಲೆ ಕೊಡಬೇಕು.
- ಮುಂದೆ ಹುಟ್ಟುವ ಮಕ್ಕಳಿಗೆ ತೊಂದರೆಯಾಗುತ್ತದೆ.
- ಸ್ವಾಭಿಮಾನದ ಪ್ರಶ್ನೆ, ಕುಟುಂಬಕ್ಕೆ ಕಳಂಕ.
- ತಂದೆ–ತಾಯಿ ಪ್ರೀತಿ ಮುಂದೆ ಯಾವ ಪ್ರಕ್ರಿಯೆ ಇಲ್ಲ. ಅವರಿಗೆ ಮೊಸ ಮಾಡುವುದಿಲ್ಲ.
- ಒಂದೊಂದು ಜನಾಂಗದಲ್ಲಿ ಶ್ರೇಷ್ಠ ಸಂಪ್ರದಾಯ ಇರುತ್ತೆ ಅದರ ಪ್ರಕಾರ ನಾವು ನಡೆಯಬೇಕು.
- ನಮ್ಮ ಜಾತಿ, ಧರ್ಮಕ್ಕೆ ತಕ್ಕಂತೆ ವಿವಾಹವಾಗುವುದು ಭಾರತೀಯ ಹಿಂದೂ ಜನಗಳ ಸಂಸ್ಕೃತಿ.
- ಗಲಾಟೆ ಆಗುತ್ತೆ.
- ಬೇರೆಯವರ ಜಾತಿಯಿಂದ ಮದುವೆ ಆದರೆ ಹೊಂದಿಕೆಯಾಗುವುದಿಲ್ಲ.
- ಜಾತಿ, ಧರ್ಮ ಶ್ರೇಷ್ಠವಾದುದು. ಅವುಗಳು ಕೆಡುತ್ತದೆ.
- ನನಗೆ ನನ್ನ ಧರ್ಮದ ಬಗ್ಗೆ ಇರುವ ನಿಲುವು ಸ್ಪಷ್ಟವಾಗಿದೆ. ಅದಕ್ಕೆ ಬೇರೆ ಧರ್ಮವನ್ನು ವಿರೋಧಿಸುತ್ತೇನೆ.

**ದಕ್ಷಿಣ ಕನ್ನಡ**

- ಹೆತ್ತವರ ಮನಸ್ಸು ನೋಯಿಸಲು ಇಷ್ಟವಿಲ್ಲ.
- ಲವ್ ಜಿಹಾದ್ ಆಗಬಹುದು, ಮೋಸ ಹೋಗಬಹುದು.
- ಮೊದಲಿನಿಂದ ಬಂದ ಸಂಪ್ರದಾಯವನ್ನು ಮೀರಲು ಇಷ್ಟವಿಲ್ಲ.
- ಮತಾಂತರವಾಗುತ್ತದೆ.
- ಜಾತಿ ವ್ಯವಸ್ಥೆಯನ್ನು ಮೀರಲು ಭಯವಿದೆ.
- ಮುಸ್ಲಿಂ ಧರ್ಮದಲ್ಲಿ ಒಪ್ಪಿತವಿಲ್ಲ,
- ನಾನು ನನ್ನ ಧರ್ಮವನ್ನು ಗೌರವಿಸುತ್ತೇನೆ, ಬಿಟ್ಟುಕೊಡುವುದಿಲ್ಲ.
- ಮನೆಯವರ ಮನಸ್ಸು ನೋಯಿಸಲು ಇಷ್ಟವಿಲ್ಲ.
- ಧರ್ಮ ಮೀರಿ ಮದುವೆಯಾದರೆ ಅಲ್ಲಿ ಮತಾಂತರ ನಡೆಯುವ ಸಾಧ್ಯವಿದೆ. ಅಲ್ಲದೆ ಕೋಮುಗಲಭೆಗೆ ಅಹ್ವಾನವಾದಂತೆ.
- ಧರ್ಮದಿಂದ ಹೊರಗೆ ಹೋಗುವುದು ಬೇಡ.
- ಬೇರೆ ಧರ್ಮದವರು ತೊಂದರೆ ಮಾಡಬಹುದು.
- ಸಂಬಂಧಗಳ ನಡುವೆ ಬಿರಕು ಮೂಡಬಹುದು.
- ಸಮಸ್ಯೆಯಲ್ಲಿ ಸಿಲುಕಲು ಇಷ್ಟವಿಲ್ಲ.
- ಜಾತಿ ಮತ್ತು ಧರ್ಮವೆನ್ನುವುದು ಒಂದು ಬದುಕಿನ ಚೌಕಟ್ಟು. ಅದನ್ನು ಮೀರಿ ನಡೆಯುವುದು ಇಷ್ಟವಿಲ್ಲ.
- ಧರ್ಮ ಶ್ರೇಷ್ಠವಾದುದು, ಅದರಂತೆ ನಡೆಯುವುದು ನಮ್ಮ ಧರ್ಮ.


- ಯಾರೇ ಆಗಲಿ ಅವರವರ ಧರ್ಮವನ್ನು ಗೌರವಿಸಬೇಕು.
- ನನಗೆ ನನ್ನ ಕಂಫರ್ಟ್ ಝೋನ್‌ನಿಂದ ಹೊರಗೆ ಬರಲು ಇಷ್ಟವಿಲ್ಲ. ನನಗೆ ನನ್ನ ಕುಟುಂಬದಲ್ಲಿ ಕಲಹಗಳನ್ನು ಸೃಷ್ಟಿಸಲು ಇಷ್ಟವಿಲ್ಲ.
- ಮನೆಯವರ ಮರ್ಯಾದೆಗೆ ಧಕ್ಕೆ ಬರುತ್ತದೆ.
- ನಾನು ನನ್ನ ಧರ್ಮವನ್ನು ಪ್ರೀತಿಸುತ್ತೇನೆ, ಗೌರವಿಸುತ್ತೇನೆ, ಇನ್ನೊಂದು ಧರ್ಮಕ್ಕೆ ಸೇರಲು ಇಷ್ಟಪಡುವುದಿಲ್ಲ. ಹಾಗೆಂದು ಬೇರೆ ಧರ್ಮವನ್ನು ದ್ವೇಷಿಸಲಾರೆ.
- ಜಾತಿ, ಧರ್ಮವನ್ನು ಬಿಡಲು ನನ್ನಿಂದ ಸಾಧ್ಯವಿಲ್ಲ.
- ಪ್ರತಿಯೊಂದು ಧರ್ಮಕ್ಕೂ ಅದರದೇ ಆದ ಘನತೆ ಇರುತ್ತದೆ.
- ನಾನು ಬೇರೆ ಜಾತಿ, ಧರ್ಮವನ್ನು ಗೌರವಿಸುತ್ತೇನೆ, ಆದರೆ ಅನುಕರಣೆ ಮಾಡಲು ಇಷ್ಟವಿಲ್ಲ.
- ಒಗ್ಗಟ್ಟು ಹಾಳಾಗಬಹುದು.

ಒಟ್ಟಿನಲ್ಲಿ ಯುವಜನರು ಜಾತಿ, ಧರ್ಮವನ್ನು ಮೀರಿ ಪ್ರೇಮವಿವಾಹ ಇಷ್ಟ ಇಲ್ಲದಿರಲು ನೀಡಿದ ಕಾರಣಗಳನ್ನು ಗಮನಿಸಿದರೆ ಅವರಲ್ಲಿ ಭಯ ನಿಚ್ಚಳವಾಗಿ ಕಾಣುತ್ತದೆ. ಅಷ್ಟೇ ಅಲ್ಲ ತಮ್ಮ ಧರ್ಮ ಇತರ ಧರ್ಮಕ್ಕಿಂತ ಶ್ರೇಷ್ಠವಾದುದು. ಅದನ್ನು ಉಳಿಕೊಳ್ಳುಸುವುದು ಅವರ ಕರ್ತವ್ಯವೆಂದು ಭಾವಿಸಿರುವುದು ಗಮನಕ್ಕೆ ಬರುತ್ತದೆ. ಸಂಗಾತಿಯ ಆಯ್ಕೆ ವಿಷಯ ಎಷ್ಟೇ ವಯಕ್ತಿಕವಾಗಿದ್ದರೂ ಪೋಷಕರ ವಿರುದ್ಧ ಹೋಗಲು ಭಯಪಡುವುದು ಕಾಣಬಹುದು. ಅವರ ಪ್ರೀತಿಯನ್ನು ಕಳೆದುಕೊಳ್ಳುವ ಭಯ ಕಾಣುತ್ತದೆ. ಇಂತಹ ಮದುವೆಯಾದರೆ ತಮ್ಮ ಸುರಕ್ಷಾ ವಲಯಕ್ಕೆ ಧಕ್ಕೆಯಾಗಬಹುದು ಎನ್ನುವ ಆತಂಕವೂ ಕಾಣುತ್ತದೆ.


**ಯುವಜನರಲ್ಲಿ ಅಂತರ್ಜಾತಿಯ, ಅಂತರ್ ಧರ್ಮೀಯ ಮದುವೆಯ ಕುರಿತಾಗಿ ಇರುವ ಅಭಿಪ್ರಾಯಗಳನ್ನು ಅರಿತುಕೊಳ್ಳುವುದು**

| ಬೇರೆ ಬೇರೆ ಜಾತಿ, ಧರ್ಮದ ಗಡಿಗಳನ್ನು ಮೀರಿ ಮದುವೆ ಯಾಗಬಹುದೇ | ಆಗಲೇ ಬಾರದು | ಜಾತಿ ಮೀರಿ ಆಗಬಹುದು ಆದರೆ ಧರ್ಮವನಲ್ಲ | ಧರ್ಮ ಮೀರಿ ಆಗಬಹುದು ಆದರೆ ಜಾತಿಯಲ್ಲ | ಜಾತಿ ಆಗಲಿ, ಧರ್ಮ ವಾಗಲಿ ಮೀರಿ ಮದುವೆ ಆಗಬಹುದು | ಉತ್ತರಿಸಲಿಲ್ಲ |
|---|---|---|---|---|---|
| **ದ.ಕ** | **16** | **46** | **1** | **43** | **0** |
| **ಚಿತ್ರದುರ್ಗ** | **13** | **21** | **4** | **53** | **1** |
| **ಒಟ್ಟು** | **29** | **67** | **5** | **96** | **1** |

ದಕ್ಷಿಣ ಕನ್ನಡ




ಚಿತ್ರದುರ್ಗ




ಜಾತಿ ಅಥವಾ ಧರ್ಮವನ್ನು ಮೀರಿ ಮದುವೆಯಾಗಬಹುದು ಎಂದು 96 (48%) ಯುವಜನರು ಅಭಿಪ್ರಾಯ ಪಟ್ಟರೆ, ಅದರಲ್ಲಿ 49 (24%) ಮಹಿಳೆಯರು ಮತ್ತು 47 (23%) ಪುರುಷ ಯುವಜನರು ಅಂತೆಯೇ 96ರಲ್ಲಿ (48%) ಎಸ್.ಸಿ/ಎಸ್.ಟಿಯವರು 20(10%) ಜನ ಎಂಬುದು ಯೋಚಿಸಬೇಕಾದ ವಿಷಯ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜಾತಿಮೀರಲು ಒಂದಿಷ್ಟು ಒಲವು ಕಂಡರೂ, ಧರ್ಮ ಮೀರಿದ ಮದುವೆಯ ಕುರಿತು ಬಹಳ ಭಯ ವ್ಯಕ್ತವಾಗುತ್ತದೆ. ಚಿತ್ರದುರ್ಗದಲ್ಲಿ ಜಾತಿ ಮೀರಲು ಆಳವಾದ ಭಯ ಕಂಡು ಬರುತ್ತದೆ.

## 8.ದತ್ತಾಂಶ ಸಂಗ್ರಹ ಮತ್ತು ವಿಶ್ಲೇಷಣೆ

**ಮದುವೆಯ ಕುರಿತು ಯುವಜನರ ಅಭಿಪ್ರಾಯ:**

- ಮದುವೆ ಬೇಡ ಎಂದವರು 7 (3%) ಯುವಜನರು.
- ಸಮಯ ಬಂದಾಗ ಆಗುವೆ ಎಂದವರು 191 (96%) ಯುವಜನರು.
- ಮುಖ್ಯವಾಗಿ ಮದುವೆ ಬೇಡ ಎಂದ ಯುವಜನರಲ್ಲಿ 6 (3%) ಮಂಗಳೂರಿನವರು ಮತ್ತು ಒಬ್ಬರು ಚಿತ್ರದುರ್ಗದವರಾಗಿದ್ದಾರೆ.

ನಿಮ್ಮ ಬಾಳಸಂಗಾತಿಯ ಆಯ್ಕೆಯ ವಿಷಯ ಬಂದಾಗ 58 ಯುವಜನರು ತಮ್ಮದೇ ಎಂದರೆ, 27 (13%) ಯುವಜನರು ಹಿರಿಯರು ನಿಶ್ಚಯಿಸಿದಂತೆ ಆಗುವುದು ಎಂದು ಹೇಳಿದರೆ ನಾನು ಮತ್ತು ಹೆತ್ತವರೊಂದಿಗೆ ಚರ್ಚಿಸಿ 109 (55%) ಯುವಜನರು ಅಭಿಪ್ರಾಯಪಟ್ಟಿದ್ದಾರೆ.



**ಅಂತರ್ಜಾತಿ/ಧರ್ಮದ ವಿವಾಹದ ವಿಷಯದ ಕುರಿತಾಗಿ ವಯಕ್ತಿಕವಾದ ನಿಲುವುಗಳು**

| | **ದಕ್ಷಿಣ ಕನ್ನಡ** | **ಚಿತ್ರದುರ್ಗ** |
|---|---|---|
| ಜಾತಿ ಧರ್ಮ ಲೆಕ್ಕಿಸುವುದಿಲ್ಲ | 37 | 46 |
| ಜಾತಿ ಮೀರುತ್ತೇವೆ ಆದರೆ ಧರ್ಮವನ್ನಲ್ಲ | 32 | 15 |
| ಧರ್ಮ ಮೀರುತ್ತೇನೆ ಆದರೆ ಜಾತಿಯನ್ನಲ್ಲ | 1 | 2 |
| ಜಾತಿ ಧರ್ಮವನ್ನು ಮೀರಿ ವಿವಾಹವಾಗಲು ಬಯಸುವುದಿಲ್ಲ | 33 | 29 |
| ಉತ್ತರಿಸದೇ ಇರುವವರು | 3 | 0 |

- ಪ್ರೀತಿಸಿ ಮದುವೆಯಾಗುವ ಸಂದರ್ಭ ಬಂದರೆ 83 (41%) ಯುವಜನರು ಜಾತಿ, ಧರ್ಮವನ್ನು ಲೆಕ್ಕಿಸುವುದಿಲ್ಲ. 47 (23%) ಯುವಜನರು ಜಾತಿಯನ್ನು ಮೀರುತ್ತೇನೆ ಆದರೆ ಧರ್ಮವನ್ನು ಮೀರಲು ಬಯಸುವುದಿಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.
- 3(1%) ಯುವಜನರು ಧರ್ಮವನ್ನು ಮೀರುತ್ತೇನೆ ಆದರೆ ಜಾತಿಯನ್ನು ಮೀರಲು ಬಯಸುವುದಿಲ್ಲ ಎಂದಿದ್ದಾರೆ.
- 62(31%) ಯುವಜನರು ಜಾತಿ, ಧರ್ಮವನ್ನು ಮೀರಿ ವಿವಾಹವಾಗಲು ಬಯಸುವುದಿಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

**ಜಾತಿ, ಧರ್ಮವನ್ನು ಮೀರಿ ವಿವಾಹವಾಗಲು ಬಯಸುವುದಿಲ್ಲವಾದರೆ ಕಾರಣಗಳು**

- ನನಗೆ ಇಷ್ಟವೇ ಇಲ್ಲ –50 (25%) ಯುವಜನರು.
- ಮನೆಯಲ್ಲಿ ಒಪ್ಪುವುದಿಲ್ಲ ಎನ್ನುವ ಭಯವಿದೆ– 26(13%) ಯುವಜನರು.
- ಸಮಾಜ ಒಪ್ಪುವುದಿಲ್ಲ ಎನ್ನುವ ಭಯವಿದೆ– 15(7%) ಯುವಜನರು.
- ಹುಟ್ಟುವ ಮಕ್ಕಳ ಭವಿಷ್ಯದ ಕುರಿತು ಆತಂಕವಿದೆ– 12 (6%) ಯುವಜನರು.
- ಒಡಹುಟ್ಟಿದವರ ಮದುವೆಗೆ ತೊಂದರೆಯಾಗಬಹುದು–16 (8%) ಯುವಜನರು.
- ಕುಟುಂಬದ ಘನತೆಗೆ ಧಕ್ಕೆಯಾಗಬಹುದು ಎಂಬ ಭಯ–30 (15%) ಯುವಜನರು.
- ಅವರ ಸಂಪ್ರದಾಯ, ಸಂಸ್ಕೃತಿಗೆ ಹೊಂದಿಕೊಳ್ಳಲು ಕಷ್ಟ–13 (6.5%) ಯುವಜನರು.
- ಎರೇಂಜ್ಡ್ ಮದುವೆಯಾದಾಗ ಕುಟುಂಬದಿಂದ ಸಿಗುವ ಸುರಕ್ಷತೆ ಬೆಂಬಲ ಸಿಗದೇ ಹೋಗಬಹುದು ಎನ್ನುವ ಭಯ–25 (12%) ಯುವಜನರು.

**ಯುವ ಜನರಲ್ಲಿ ಜಾತಿ ಮತ್ತು ಧರ್ಮದ ವಿಷಯಕ್ಕೆ ಬಂದಾಗ ಅವರು ತೆಗೆದುಕೊಳ್ಳುವ ನಿಲುವುಗಳ ಕುರಿತಾಗಿಯೂ ವಿಚಾರಿಸಲಾಯಿತು:**

**ಬೇರೆಯವರು ಜಾತಿ ಗಡಿ ಮೀರಿ ಮದುವೆಯಾಗುವುದಾದರೆ**

| | ವಿರೋಧಿಸುತ್ತೇನೆ | ಬೆಂಬಲಿಸುತ್ತೇನೆ | ತಟಸ್ಥವಾಗಿರುತ್ತೇನೆ |
|---|---|---|---|
| ಕುಟುಂಬ ಸದಸ್ಯರು | 29 | 109 | 57 |
| ಸ್ನೇಹಿತರು | 9 | 144 | 42 |
| ನನ್ನ ಜಾತಿ ಧರ್ಮದ ಇತರೆಯವರು ಮದುವೆಯಾದರೆ | 20 | 106 | 71 |

**ಬೇರೆಯವರು ಧರ್ಮದ ಗಡಿ ಮೀರಿ ಮದುವೆಯಾಗುವುದಾದರೆ**

| | ವಿರೋಧಿಸುತ್ತೇನೆ | ಬೆಂಬಲಿಸುತ್ತೇನೆ | ತಟಸ್ಥವಾಗಿರುತ್ತೇನೆ |
|---|---|---|---|
| ಕುಟುಂಬ ಸದಸ್ಯರು | 74 | 67 | 54 |
| ಸ್ನೇಹಿತರು | 33 | 106 | 57 |
| ನನ್ನ ಜಾತಿ ಧರ್ಮದ ಇತರೆಯವರು ಮದುವೆಯಾದರೆ | 36 | 82 | 78 |

**ಪ್ರಸ್ತುತ ನಮ್ಮ ಸುತ್ತಾಮುತ್ತಲಿನ ಅನೇಕ ಮರ್ಯಾದಾ ಹತ್ಯೆಗಳು, ಹಲ್ಲೆಗಳ ಕುರಿತು ಯುವಜನರ ಅಭಿಪ್ರಾಯ:**

188 (94%) ಯುವಜನರು ಇಂತಹ ಹಲ್ಲೆಗಳು ಸರಿಯಲ್ಲ ಎಂದು ತಿಳಿಸಿರುತ್ತಾರೆ. ಆದರೆ 10 (5%) ಯುವಜನರು ಇಂತಹ ಹಲ್ಲೆಗಳು ಸಮರ್ಥನೀಯ ಎಂಬಂತೆ ಅಭಿಪ್ರಾಯ ಪಟ್ಟಿರುತ್ತಾರೆ. ಈ ಹತ್ತರಲ್ಲಿ 8 (4%) ಯುವಜನರು ಮಂಗಳೂರಿನವರಾಗಿದ್ದು, 2(1%) ಯುವಜನರು ಚಿತ್ರದುರ್ಗದವರಾಗಿದ್ದಾರೆ. ಈ ದತ್ತಾಂಶವು ಈಗಿನ ಮಂಗಳೂರಿನ ಪರಿಸ್ಥಿತಿಯನ್ನು ಪ್ರತಿಬಿಂಬಿಸುವಂತಿದೆ. 188(94%) ಯುವಜನರು ಹಿಂಸೆಯ ವಿರುದ್ಧ ಇದ್ದಾರೆ ಎನ್ನುವುದು ಸಮಾಧಾನಕರ ಮತ್ತು ಖುಷಿಯ ವಿಷಯ.

- ಬೇರೆ ಜಾತಿ, ಧರ್ಮದಲ್ಲಿ ಮದುವೆಯಾದವರಿಗೆ ಸರ್ಕಾರವು ಕಾನೂನಿನ ನೆರವನ್ನು ನೀಡಬಹುದೆಂದು 183 (92%) ಯುವಜನರು ಒಪ್ಪುತ್ತಾರೆ. 15 (7%) ಯುವಜನರು ಕಾನೂನು ನೆರವನ್ನು ಕೊಡಬಾರದು ಎಂದು ಅಭಿಪ್ರಾಯಪಟ್ಟಿದ್ದಾರೆ.
- ಬೇರೆ ಜಾತಿ ಧರ್ಮದಲ್ಲಿ ಮದುವೆಯಾದವರಿಗೆ ಸರ್ಕಾರವು ಹಣಕಾಸಿನ ನೆರವನ್ನು ನೀಡಬಹುದೆಂದು 173 (87%) ಯುವಜನರು ನೀಡಬಾರದೆಂದು 25 (12%) ಯುವಜನರು ಅಭಿಪ್ರಾಯಪಟ್ಟಿದ್ದಾರೆ.

## 9. ಅಂತರ್ಜಾತಿ ಮತ್ತು ಅಂತರ್ ಧರ್ಮಿಯ ಮದುವೆಯಾದವರ ಸಂದರ್ಶನಗಳು

ಶತಮಾನದಿಂದಲೂ ಭಾರತೀಯ ಸಮಾಜವನ್ನ ಜಾತಿ ವ್ಯವಸ್ಥೆ ಮತ್ತು ಧರ್ಮದ ಆಧಾರದ ಮೇಲೆ ವಿಭಜಿಸಲಾಗಿದೆ. ಜಾತಿ ಮತ್ತು ಧರ್ಮ ಭಾರತೀಯ ಸಮಾಜದಲ್ಲಿ ಅವಿಭಾಜ್ಯ ಅಂಗವಾಗಿಯೇ ಉಳಿದಿದೆ. ಈ ಎರಡೂ ವ್ಯವಸ್ಥೆಗಳು ಸಮುದಾಯಗಳ ನಡುವೆ ದ್ವೇಷ, ಅಸೂಯೆಗಳ ಮೂಲಕ ಬಿರುಕುಂಟುಮಾಡುತ್ತಿದೆ. ಅದರಲ್ಲಿ ಮದುವೆ ಎಂಬುದು ಒಂದೇ ಜಾತಿಯ, ಅದೇ ಧರ್ಮದ ಹೆಣ್ಣು–ಗಂಡಿನ ನಡುವೆ ನಡೆಯಬೇಕಾದ್ದು ಎಂಬ ಕಟ್ಟುಪಾಡೂ ಸಹ ವಿಧಿಸಿದೆ. ಭಿನ್ನ ಧರ್ಮೀರನ್ನ, ಅನ್ಯಜಾತಿಯವರನ್ನ ಮದುವೆಯಾಗುವುದು ಸಾಮಾಜಿಕವಾಗಿ ಒಪ್ಪಿತವಲ್ಲದ್ದಾಗಿದೆ. ಗಡಿಗಳನ್ನು ಮೀರಿ ಸಂಗಾತಿಯ ಆಯ್ಕೆ ಮಾಡಿಕೊಳ್ಳುವುದು ಸಾಮಾಜಿಕ ಕಳಂಕ ಎಂಬಂತೆ ನೋಡಲಾಗುತ್ತದೆ.

ಭಾರತಕ್ಕೆ ಅಂಟಿರುವ ಜಾತಿ ವ್ಯವಸ್ಥೆ, ಅಸ್ಪೃಶ್ಯತೆ, ತಾರತಮ್ಯವನ್ನು ತೊಳೆದು ಹಾಕಲು ಅನೇಕ ಸಮಾಜ ಸುಧಾರಕರು ಶ್ರಮಿಸಿದ್ದು ಮಾತ್ರವಲ್ಲದೆ, ಬ್ರಿಟಿಷರು ಕೂಡ ತಮ್ಮ ಆಳ್ವಿಕೆಯಲ್ಲಿ ನಡೆಸಿದ ಪ್ರಯತ್ನಗಳನ್ನ ನಾವು ಇತಿಹಾಸದಲ್ಲಿ ಗಮನಿಸಿಯೇ ಇದ್ದೇವೆ. ಆದರೆ ಗಡಿಗಳನ್ನು ಮೀರಿ ಮದುವೆಯಾಗುವ ವಿಚಾರಕ್ಕೆ ಬಂದರೆ ಅದು ನಿಷೇಧದಂತಿರುತ್ತದೆ. ಇದ್ಯಾವುದನ್ನೂ ಒಪ್ಪಿತ ಎಂದು ಮುಂದುವರೆಸಿಕೊಂಡು ಹೋಗಲು ಇಚ್ಚಿಸದ ಅನೇಕ ಯುವಜನರು ತಮ್ಮಿಷ್ಟದ ಆಯ್ಕೆಗಳನ್ನು ಮಾಡಿಕೊಳ್ಳಲು ಮುಂದಾಗುತ್ತಿದ್ದಾರೆ. ದೇಶದ ಬಹುದೊಡ್ಡ ಆಸ್ತಿಯಾಗಿರುವ ಯುವಜನರು ತಮ್ಮ ನಿಲುವುಗಳು ಬದಲಾಯಿಸಿಕೊಂಡು, ಅಂತರ್ಜಾತಿ ಮತ್ತು ಅಂತರ್ ಧರ್ಮೀಯರನ್ನ ಪ್ರೀತಿಸಿ ಮದುವೆಯಾಗಲು ಹೆಚ್ಚು ಒಲವು ತೋರುತ್ತಿರುವುದು ಬದಲಾವಣೆಯ ಗಾಳಿ ಬೀಸಿದಂತಾಗಿದೆ. ಸಾಮಾಜಿಕ ಚೌಕಟ್ಟಿಗೆ ಜೋತುಬೀಳದೆ ಅದನ್ನ ಮೀರುವ ಪ್ರಯತ್ನವನ್ನ ಮಾಡುತ್ತಿದ್ದಾರೆ. ಸಮಾಜ ನಿರ್ಮಿಸಿರುವ ಗೋಡೆಗಳನ್ನು ಹೊಡೆದು ತಮ್ಮಿಷ್ಟದ ಆಯ್ಕೆಗಳನ್ನು ಮಾಡಿಕೊಳ್ಳುತ್ತಿದ್ದಾರೆ.

"ಈ ಸಮಾಜದಲ್ಲಿ ಅಂತರ್ಜಾತಿ ವಿವಾಹವಾದವರನ್ನು ನಾನು 'ಬಂಡಾಯಗಾರರು' ಎಂದು ಕರೆಯುತ್ತೇನೆ. ಜಾತಿಯ ಗಡಿಗೆರೆಗಳನ್ನು ದಾಟಿ ಜಾತೀಯತೆಯ ಅನಿಷ್ಠವನ್ನು ಮೆಟ್ಟಿನಿಂತ ಇವರು ನಿಜವಾದ ಬಂಡಾಯಗಾರರು. ಯಾವುದೇ ಲಾಭ ಲೆಕ್ಕಾಚಾರಗಳಿಗೆ ಬೆಲೆಕೊಡದೆ ಪ್ರೇಮ ಪ್ರೀತಿಗೆ ಬೆಲೆಕೊಟ್ಟು ಇವರು ಅಂತರ್ಜಾತಿ ವಿವಾಹವಾಗುತ್ತಾರೆ. ಅಂತರ್ಜಾತಿ ವಿವಾಹವಾದವರು ಆರ್ಥಿಕವಾಗಿ ಅಭದ್ರತೆ, ಆತಂಕಕ್ಕೆ ಒಳಗಾಗಿದ್ದಾರೆ. ಸಮಾಜ ಇವರನ್ನು ಜಾತಿ ಬಿಟ್ಟವರು, ಕುಲಗೆಟ್ಟವರು ಎಂದು ಕರೆಯುತ್ತದೆ. ಕುಲಗೆಟ್ಟವರು ಎಂಬುದಕ್ಕೆ ಅಂತರ್ಜಾತಿ ವಿವಾಹದವರು ಎಂಬ ಅರ್ಥವಿದೆ. ಈ ಶಬ್ದವನ್ನು ಬಳಸಬಾರದು. ನಮ್ಮ ಭಾಷೆ ಎಷ್ಟು ಪ್ರತಿಗಾಮಿಯಾಗಿದೆ ಎನ್ನುವುದಕ್ಕೆ ಇಂತಹ ಶಬ್ದಗಳು ಸಾಕ್ಷಿಯಾಗಿವೆ. ಅಂತರ್ಜಾತಿ ವಿವಾಹವಾದವರನ್ನು ಎರಡೂ ಕಡೆಯ ಜಾತಿಗಳವರು ದೂರೀಕರಿಸುವುದರಿಂದ ಯಾವುದೇ ಆಸರೆಯಿಲ್ಲದಂತಾಗುವ ಇವರಿಗೆ ಸರ್ಕಾರವೇ ಆಸರೆಯಾಗಬೇಕು. ಪ್ರೋತ್ಸಾಹ ಕೊಡುವುದರಿಂದ ಭಾವೈಕ್ಯತೆಯ ಹೂಗಳು ನಮ್ಮ ಹೃದಯದಲ್ಲಿ ಅರಳುವುದಕ್ಕೆ ಸಾಧ್ಯ ಇದೆ. ಪ್ರಜಾಪ್ರಭುತ್ವ ಯಶಸ್ವಿಯಾಗುವುದಕ್ಕೆ ಸಾಧ್ಯ ಇದೆ. ಇದರಿಂದ ಸಾಮಾಜಿಕ ಕ್ರಾಂತಿ ದಾರಿಯಾಗುತ್ತದೆ" ಎಂದು ಡಾ.ಸಿದ್ದಲಿಂಗಯ್ಯ (2009) ಅಭಿಪ್ರಾಯಪಟ್ಟಿದ್ದಾರೆ.

ಪ್ರೀತಿ ಎಂಬುದು ಯಾರಿಗೆ ಯಾವಾಗ ಬೇಕಾದರೂ ಉಂಟಾಗಬಹುದಾಗಿದೆ. ಇಂತವರ ಮೇಲೆ ಪ್ರೀತಿಯಾಗುತ್ತದೆ, ಇಂತವರ ಮೇಲೆ ಪ್ರೀತಿಯಾಗುವುದಿಲ್ಲ ಎಂಬುದು ಇಲ್ಲ. ಕಾರಣಗಳು ಏನೇ ಇದ್ದರೂ ಒಲವು, ಪ್ರೀತಿ, ಆಕರ್ಷಣೆ ಯಾರ ಮೇಲೆಯಾದರೂ ಆಗಬಹುದು ಎಂದು ಯುವಜನರು ಅಭಿಪ್ರಾಯ ಪಟ್ಟಿದ್ದಾರೆ. ಅವರೇ ಹೇಳಿರುವಂತೆ:

*"ನಾನು ಮತ್ತು ಮುಬೀನ ನೀರು ಹಿಡಿಯುವಾಗ, ಶಾಲೆಗೆ ಹೋಗಿ ಬರುವಾಗ ಒಬ್ಬರನ್ನೊಬ್ಬರು ನೋಡುತ್ತಿದ್ದೆವು. ಹಾಗೆಯೇ ಪರಸ್ಪರ ಮಾತನಾಡುತ್ತಾ ಪರಿಚಯವಾಗಿದ್ದೆವು. ಅವಳು ಕಾಲೇಜಿಗೆ ಸೇರಿದನಂತರ ಪ್ರೀತಿ ಹುಟ್ಟಿತು. ಸಹಜವಾಗಿ ನೀವು ನನಗೆ ಇಷ್ಟವಾಗಿದ್ದೀರ, ನಿಮ್ಮ ಮೇಲೆ ಪ್ರೀತಿಯಾಗಿದೆ ಎಂದು ಪ್ರಪೋಸ್ ಮಾಡಿದ".*

*“ನಾವಿಬ್ಬರು ಗೌಡರ ಜಮೀನು ಹೊಲದ ಕೆಲಸಗಳನ್ನು ಒಟ್ಟಿಗೆ ಮಾಡುತ್ತಿದ್ದೆವು. ಆಗ ಅವರ ಮೇಲೆ ಮನಸ್ಸಾಗಿತು. ಅವಳು ಒಮ್ಮೆ ಹುಷಾರಿಲ್ಲದಿದ್ದಾಗ ಮಾತ್ರೆ, ಔಷಧ ಕೊಡಿಸಿ ಕಾಳಜಿ ತೋರಿಸಿದ್ದೆ. ಅದು ಅವಳಿಗೆ ತುಂಬಾ ಇಷ್ಟವಾಗಿ ನನ್ನ ಮೇಲೆ ಪ್ರೀತಿಯಾತು. ಇಬ್ಬರೂ ಇಷ್ಟಪಟ್ಟೆವು”.*

*“ನಾವು ನೆರೆಹೊರೆಯ ಮನೆಯವರಾಗಿದ್ದೆವು. ಅವರ ಮೇಲೆ ಆಕರ್ಷಣೆಯಾಗಿತ್ತು. ಅಲ್ಪಸ್ವಲ್ಪ ಮಾತುಕತೆ ಅಲ್ಲಲ್ಲಿ ನಡೆಯುತ್ತಿತ್ತು. ಅವರು ಪ್ರಪೋಸ್ ಮಾಡಿದರು. ನಂತರ ಕೆಲವೇ ದಿನಗಳಲ್ಲಿ ಮದುವೆಯಾಗುವ ನಿರ್ಧಾರಕ್ಕೆ ಬಂದೆವು”.*

*“ಬೇರೆಯವರನ್ನು ಮದುವೆಯಾಗಲು ಮನಸ್ಸು ಒಪ್ಪುತ್ತಿರಲಿಲ್ಲ. ಪರಸ್ಪರ ಇದ್ದಂತಹ ಕಾಳಜಿಯಿಂದ ಆಕರ್ಷಣೆಯಾಗಿತ್ತು. ಪರಸ್ಪರ ಇದ್ದ ಚಂದ ಕಾಳಜಿ ಪ್ರೀತಿ ಹುಟ್ಟುವಂತೆ ಮಾಡಿತು”.*

*‘‘ನಾನು ಅವರ ತಾಳ್ಮೆಯ ಸ್ವಭಾವಕ್ಕೆ ಮತ್ತು ಇತರರಿಗೆ ಅವರು ನೀಡುತ್ತಿದ್ದ ಗೌರವ, ಮೆದುವಾಗಿ ಮಾತಾಡುವ ರೀತಿಗೆ ಆಕರ್ಷಿತಳಾಗಿದ್ದೆ”.*

ಹೀಗೆ ಪ್ರೀತಿ ಎನ್ನುವುದು ಯಾರಿಗೆ ಹೇಗೆ ಹುಟ್ಟುತ್ತದೆ. ಯಾವಾಗ ಯಾರ ಮೇಲೆ ಪ್ರೀತಿಯಾಗುತ್ತದೆ ಎಂದು ಹೇಳಲು ಸಾಧ್ಯವಿಲ್ಲ ಎಂದು ಗಡಿಗಳನ್ನು ಮೀರಿ ಮದುವೆಯಾದ ಯುವಜನರು ಅಭಿಪ್ರಾಯಪಟ್ಟಿದ್ದಾರೆ.

- **ಗಡಿಯಾಚೆಗಿನ ಮದುವೆಯ ಅನಿಶ್ಚಿತತೆ ಮತ್ತು ಶಿಕ್ಷೆಯ ಭಯ**

ಶ್ರೇಣೀಕೃತ ಭಾರತೀಯ ಸಮಾಜದಲ್ಲಿ ಇಂದಿಗೂ ಮದುವೆಗೂ, ಜಾತಿಗೂ, ಧರ್ಮಕ್ಕೂ ಒಂದ್ದಕೊಂದು ತಳುಕುಹಾಕಿ ನೋಡುವ ಪದ್ಧತಿ ಇದೆ. ಮದುವೆ ಎಂದರೆ ಏನು?, ಮದುವೆಯನ್ನು ಯಾರು ಯಾರೊಂದಿಗೆ ಮಾಡಿಕೊಳ್ಳಬೇಕು?, ಯಾವಾಗ ಮದುವೆಯಾಗಬೇಕು? ಎಂಬುದನ್ನು ಈ ಸಮಾಜದಲ್ಲಿ ಈಗಾಗಲೇ ನಿರ್ಧಾರ ಮಾಡಿರುವ ಸಿದ್ಧಮಾದರಿಯನ್ನು ಅನುಸರಿಸೇಕಾದ ಅನಿರ್ವಾಯತೆಯನ್ನು ಸೃಷ್ಟಿಸಲಾಗಿದೆ. ಇದು ಅವರವರ ವಯಕ್ತಿಕ ವಿಚಾರಕ್ಕೆ ಬಿಟ್ಟ ವಿಷಯ. ಪರಸ್ಪರ ಸಮ್ಮತಿಯೊಂದಿಗೆ ಜೀವಿಸುವ ಹಕ್ಕಿದೆ ಎಂಬ ಕನಿಷ್ಟ ಆಲೋಚನೆಯನ್ನೂ ಊಹಿಸಿಕೊಳ್ಳಲು ಸಿದ್ಧವಿರದ ಸಾಮಾಜಿಕರಚನೆಯಲ್ಲಿ ಗಡಿಯಾಚೆಗೆ ಮದುವೆಯಾಗುವ, ಸಂಬಂಧವನ್ನು ಬೆಳೆಸುವ ಧೈರ್ಯವನ್ನು ನಮ್ಮ ಯುವಜನರು ಮಾಡುತ್ತಿದ್ದಾರೆ. ಯಾರಿಗೆ ಯಾರ ಮೇಲೆ ಪರಸ್ಪರ ಇಷ್ಟವಾಗಿ ಒಪ್ಪಿತವಾಗುವುದೋ ಅವರ ಜೊತೆಯಲ್ಲಿ ಬದುಕುತ್ತಿದ್ದಾರೆ. ಸಂಗಾತಿಗಳ ಆಯ್ಕೆ ಯಾವಾಗಲೂ ವಯಕ್ತಿಕ ನಿರ್ಧಾರವಾಗಿಯೇ ಇದ್ದರೆ ಸಾಮಾಜಿಕ ಬದಲಾವಣೆಯ ಹಾದಿಯೂ ಒಂದು ಹಂತದಲ್ಲಿ ಸುಗಮವಾಗುತ್ತದೆ ಎಂಬ ನಂಬಿಕೆಯೊಂದಿಗೆ ಮುನ್ನಡೆಯುತ್ತಿದ್ದಾರೆ.

ಧರ್ಮಗ್ರಂಥ ಮತ್ತು ಧರ್ಮಗಳು ಹಾಗೂ ಜಾತಿಗಳ ಕಟ್ಟುಪಾಡುಗಳಿಂದ ಪ್ರೀತಿಸುವ ಹಕ್ಕನ್ನು ಹತ್ತಿಕ್ಕಲಾಗುತ್ತಿದೆ. ಆದರೆ ವಾಸ್ತವದಲ್ಲಿ ಯಾವ **“ಧರ್ಮಗಳಲ್ಲಿಯೂ/ಧರ್ಮಗ್ರಂಥಗಳಲ್ಲಿಯೂ”** ಇದಕ್ಕೆ ಬೇಲಿಹಾಕಲಾಗಿಲ್ಲ. ಹಾಗೆ ನಾವು ಒಮ್ಮೆ ಹಿಂದೆ ತಿರುಗಿ ನೋಡಿದರೆ ವೇದಗಳ ಕಾಲದಲ್ಲಿ ಜಾತೀಯತೆ ಇರಲಿಲ್ಲ. ಇದು ಶುರುವಾದದ್ದು ಪುರಾಣಗಳ ಕಾಲಕ್ಕೆ. ಸ್ವಗೋತ್ರ ಪದ್ಧತಿ ಶುರುವಾದ ನಂತರ ಜಾತೀಯತೆ ಶುರುವಾಯಿತು. ಆ ಕಾಲದಲ್ಲಿಯೂ ತಳಸಮುದಾಯದ ಹೆಣ್ಣುಮಗಳು ಮತ್ತು ಮೇಲ್ವರ್ಗದ ಗಂಡನ್ನ ಮದುವೆಯಾದ ಉದಾಹರಣೆಗಳು ಕೂಡ ನಮ್ಮ ಮುಂದೆ ಇವೆ. ನಾವು ಗಮನಿಸಲೇಬೇಕಾದ ಇನ್ನೊಂದು ಅಂಶವೆಂದರೆ ಸಮಾಜದಲ್ಲಿ ಆರಾಧಿಸುವ ಬಹುತೇಕ ದೇವಾನು–ದೇವತೆಗಳು ಅಂತರ್ಜಾತಿ ವಿವಾಹವಾಗಿರುವುದು. ಶಿವ, ಶ್ರೀಕೃಷ್ಣ, ವೆಂಕಟರಮಣ, ಬಿಳಿಗಿರಿ ರಂಗಯ್ಯ ಅಂತರ್ಜಾತಿ ವಿವಾಹವಾದರೆ ಚೆಲುವನಾರಾಯಣಸ್ವಾಮಿ ಮುಸ್ಲಿಂ ಮಹಿಳೆಯನ್ನು ಮದುವೆಯಾದದ್ದನ್ನು ನಾವು ನೋಡಿದ್ದೇವೆ. ಆದರೆ ಮದುವೆ ಎನ್ನುವುದು ಕೇವಲ ಹೆಣ್ಣು–ಗಂಡಿನ ನಡುವೆಯೇ ಆಗಬೇಕೆಂಬುದಿಲ್ಲ. ಹೆಣ್ಣು–ಹೆಣ್ಣು, ಗಂಡು–

ಗಂಡು ಅಥವಾ ಅವರಿಗೆ ಯಾರ ಮೇಲೆ ಪರಸ್ಪರ ಒಪ್ಪಿಗೆಯಾಗುವುದೋ ಅವರೊಟ್ಟಿಗೆ ಜೀವಿಸುವ ಹಕ್ಕಿದೆ ಎಂಬುದನ್ನು ಎಲ್ಲರೂ ಮನಗಾಣಲೇಬೇಕಾಗಿದೆ.

ಹಾಗಾಗಿ ಜಾತಿ, ಧರ್ಮವನ್ನು ಮೀರಿದ ಹಲವು ಯುವಜನರು ತಮ್ಮ ಅನುಭವಗಳನ್ನು ಈ ಕೆಳಗಿನಂತೆ ಹಂಚಿಕೊಂಡಿದ್ದಾರೆ:

*"ನನ್ನದು ಎಸ್ಸಿ ಹಾಗೂ ಅವರದು ಬಿಲ್ಲವ ಜಾತಿ. ನನಗೆ ಹುಡುಗನೊಂದಿಗೆ ಒಪ್ಪಿಗೆಯಾಗಿತ್ತು, ಆದರೆ ಅಂತರ್ಜಾತಿ ಕಾರಣ ಸ್ವಲ್ಪ ಹೆದರಿದ್ದೆ. ಮದುವೆಯ ವಿಷಯಕ್ಕೆ ಬಂದಾಗ ಭಯ ಇತ್ತು. ಮೊದಲು ಗಡಿಗಳನ್ನು ಮೀರಿ ಮದುವೆಯಾಗುವ ಯೋಚನೆಯೇ ಇರಲಿಲ್ಲ, ಆದರೆ ಪ್ರೀತಿ ಅವುಗಳನ್ನು ನೋಡಿ ಹುಟ್ಟುವುದಿಲ್ಲವಲ್ಲಾ".*

*"ಅವರೆ ನನ್ನ ಬಳಿ ಪ್ರೀತಿ ನೀವೆದಿಸಿಕೊಂಡರು. ನಮ್ಮ ಆಸಕ್ತಿಗಳೆಲ್ಲವೂ ಒಂದೇ ಆಗಿತ್ತು. ನಾನಾಗಿ ಬೇಡ ಅಂತ ಹೇಳುವುದಕ್ಕೆ ಯಾವಕಾರಣವೂ ಇರಲಿಲ್ಲ. ನಮಗೆ ತಡೆ ಇದ್ದದ್ದು ಜಾತಿ ಮಾತ್ರ.. ಜಾತಿಯನ್ನು ಮೀರಿ ಬದುಕಬೇಕೆಂದು ಹೇಳುತ್ತಿದ್ದವಳು ನಾನು. ಹಾಗಾಗಿ ಜಾತಿದೊಡ್ಡ ವಿಷಯವಲ್ಲ, ಅದನ್ನು ನಾನು ನಿಭಾಯಿಸಬಹುದು ಎಂದು ಒಪ್ಪಿಕೊಂಡೆ."*

ಹೀಗೆ ಪ್ರೀತಿ, ಆಕರ್ಷಣೆಯ ಬಗ್ಗೆ ಮಾತಾಡುತ್ತಾ, ತಮ್ಮ ಜವಾಬ್ದಾರಿಗಳನ್ನು ಮರೆಯದೆ ಬದುಕಿನ ಕನಸುಗಳಜೊತೆಗೆ ಸಾಮಾಜಿಕ ಜಾಬ್ದಾರಿಯ ಬಗ್ಗೆಯೂ ಯುಜನರು ಮಾತನಾಡುತ್ತಾರೆ. ಬರೀ ಇಷ್ಟಟ್ಟು ಜೊತೆಯಲ್ಲಿ ಬದುಕುವುದು ಅಲ್ಲದೆ ಜಾವಾಬ್ದಾರಿಯಗಳನ್ನು ಅರಿತು ಸಮಾಜದಲ್ಲಿ ಆತ್ಮಗೌರವವೊಂದಿಗೆಗೆ ಇರಬೇಕೆಂದು ಅಭಿಪ್ರಾಯಪಟ್ಟಿದ್ದಾರೆ:

*"ಒಬ್ಬರನೊಬ್ಬರು ನಂಬಿ ಬರುವುದಕ್ಕೆ ಪರಸ್ಪರ ನಂಬಿಕೆ ಬೇಕು. ಜೊತೆ ಜೊತೆಯಾಗಿ ಅರ್ಥಮಾಡಿಕೊಂಡು ಸಾಗಬೇಕು. ಬದುಕಿನ ಬಗ್ಗೆ ಚೆನ್ನಾಗಿ ಯೋಚನೆ ಮಾಡಬೇಕು. ಆ ಅವಕಾಶ ಪ್ರೇಮ ವಿವಾಹದಲ್ಲಿ ಸಿಗುತ್ತದೆ."*

ಅಂತರ್ಜಾತಿ ವಿವಾಹ ನಮ್ಮ ಸಂಸ್ಕೃತಿಯಲ್ಲಿ ಅಂತರ್ಗತವಾಗಿದೆ. ನಾವುಗಳು ಇದನ್ನು ಮುಂದುವರಿಸಿಕೊಂಡು ಹೋಗಬೇಕು; ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ, ಶೈಕ್ಷಣಿಕ ಸಮಾನತೆಯ ಪರ ಧ್ವನಿ ಎತ್ತಿದ ಬಹುತೇಕ ವಿದ್ವಾಂಸರು, ದಾರ್ಶನಿಕರು, ಸಮಾಜಸುಧಾರಕರು ಇದನ್ನೇ ಪ್ರತಿಪಾದಿಸಿದ್ದನ್ನು ನಾವು ಕಾಣಬಹುದಾಗಿದೆ. "ಅಂತರ್ಜಾತೀಯ ಸಹಭೋಜನದಿಂದ ಜಾತಿ ನಿರ್ಮೂಲನೆಯನ್ನು ಸಾಧಿಸಬೇಕೆಂಬ ಯೋಜನೆಯನ್ನು ಸೂಚಿಸಲಾಗುತ್ತದೆ. ಇದು ಕೂಡ ಅಸಮರ್ಪಕ ಉಪಾಯವೆಂದು ನಾನು ಪರಿಗಣಿಸುತ್ತೇನೆ. ಅಂತರ್ಜಾತೀಯ ಸಹಭೋಜನಕ್ಕೆ ಅವಕಾಶಕೊಡುವಂತಹ ಜಾತಿಗಳು ಅನೇಕ ಇವೆ. ಅನೇಕ ಜಾತಿಯವರು ಕೂಡಿ ಊಟ ಮಾಡುವುದರಿಂದ ಜಾತಿ ಭಾವನೆಯೇನೂ ನಷ್ಟವಾಗಿಲ್ಲ, ಜಾತಿ ಪ್ರಜ್ಞೆಯೂ ಅಳಿದಿಲ್ಲ. ಅಂತರ್ಜಾತೀಯ ವಿವಾಹವೇ ಸರಿಯಾದ ಉಪಾಯವೆಂದು ನನಗೆ ಮನವರಿಕೆಯಾಗಿದೆ. ತಾವು ತಮ್ಮವರೆಂಬ ಆತ್ಮೀಯ ಭಾವನೆ ರಕ್ತ ಸಂಬಂಧದಿಂದಲೇ ಬರಬಲ್ಲದು. ಆ ಆತ್ಮೀಯತೆಯ ಮಮತೆಯ ಭಾವನೆ ಹುಟ್ಟದೆ ಹೋದರೆ ಜಾತಿಪದ್ಧತಿಯಿಂದ ಬೆಳೆದುಬಂದ ಪ್ರತ್ಯೇಕತಾಭಾವನೆ ಅಳಿಯಲಾರದು. ಜಾತಿ ನಿರ್ಮೂಲನೆಯ ಉಪಾಯವೆಂದರೆ ಅಂತರ್ಜಾತೀಯ ವಿವಾಹವೇ. ಬೇರೆ ಯಾವುದರಿಂದಲೂ ಜಾತಿ ಸಮಸ್ಯೆ ಪರಿಹಾರವಾಗುವುದಿಲ್ಲ". ಎಂದು ಡಾ.ಬಿ.ಆರ್.ಅಂಬೇಡ್ಕರ್ (1936:ಪುಟ68) ಅಭಿಪ್ರಾಯಪಟ್ಟಿದ್ದಾರೆ.

ಅಂತರ್ಜಾತಿ ಮತ್ತು ಧರ್ಮೀಯರೊಟ್ಟಿಗೆ ಗೆಳೆತನ ಮಾಡಲು ಮತ್ತು ಮದುವೆಯಾಗಲು ಹೆಚ್ಚಿನ ಯುವಜನರಿಗೆ ಅಭ್ಯಂತರವಿಲ್ಲ ಎಂಬ ಸಂಗತಿಯು ನಮ್ಮ ಸಂಶೋಧನೆಯಿಂದ ದೃಢಪಟ್ಟಿದೆ. ಅದರಲ್ಲಿ ಕೆಲವರು ನಮ್ಮ ಜೊತೆಗೆ ಅವರು ಗಡಿಗಳನ್ನು ಮೀರಿ ಪ್ರೀತಿಸಿದಾಗ ಮತ್ತು ಮದುವೆಯಾಗಿ ಒಟ್ಟಿಗೆ ಬದುಕಲು ಆರಂಭಿಸಿದಾಗ ಅವರಿಗಾದ ಜಾತಿ ಮತ್ತು ಧರ್ಮದ ಅನುಭವಗಳನ್ನು ಹೇಳಿಕೊಂಡಿದ್ದಾರೆ.

*"ಕೆಲವರು ನನ್ನನ್ನು ಮಾತಾನಾಡಿಸುತ್ತಿರಲಿಲ್ಲ. ಕೆಲವರು ಅವರ ಮನೆಗೆ ನನ್ನನ್ನು ನಿರಾಕರಿಸುತ್ತಿದ್ದರು. ಆಗ ಸ್ವಲ್ಪ ನೋವಾಗುತ್ತಿತ್ತು. ನಾನು ನನ್ನ ಜಾತಿಯಲ್ಲಿದ್ದ ಸಂದರ್ಭಕ್ಕಿಂತಲೂ ಮದುವೆಯ ನಂತರದಲ್ಲಿ ನನಗೆ ಜಾತಿ ಹೆಚ್ಚಾಗಿ ಕಾಡುವಂತೆ ಮಾಡಿತು."*

*"ಅಂತರ್ಜಾತಿ ಹಾಗೂ ಅಂತರ್ ಧರ್ಮದಲ್ಲಿ ಮದುವೆಯಾಗಬಯಸುವ ಯುವಜನರಿಗೆ ನೋವು, ಅಸಮಾನತೆ ಮತ್ತು ತಾರತಮ್ಯವನ್ನು ಎದುರಿಸುವ ಸಂದರ್ಭ ಬಂದೇ ಬರುತ್ತದೆ. ಅದನ್ನು ಮೀರಿ ಬದುಕಬಹುದು ಎನ್ನುವ ಭರವಸೆ ಇದ್ದಲ್ಲಿ ಯಶಸ್ವಿಯಾಗಬಹುದು."*

*"ಹುಡುಗಿ ನಮ್ಮದೇ ಊರಿನ ಮುಸ್ಲಿಂ ಸಮುದಾಯದವರು. ಅವರ ಸಮುದಾಯದ 40 ಮನೆಗಳಿದ್ದವು. ನಾವು ಮಾದಿಗರು, 85 ಮನೆಗಳಿವೆ. ಅಂತಹ ದ್ವೇಷದ ವಾತಾವರಣವೇನೂ ಇರಲಿಲ್ಲ ಎರಡು ಸಮುದಾಯಗಳು ಅನ್ಯೂನ್ಯವಾಗಿಯೇ ಇದ್ದೆವು. ನಮಗೆ ಈ ಜಾತಿ ಆ ಧರ್ಮ ಎನ್ನುವ ಬೇದವೇನು ಇರಲಿಲ್ಲ."*

*"ಕೂಲಿ ಕೆಲಸ ಮಾಡಿಕೊಂಡಿದ್ದವನು ನಮ್ಮ ನಾಯಕ ಜಾತಿಯಲ್ಲಿ ಮದುವೆ ಆಗಿದ್ದಾನೆ. ನಾವೇನು ಹೇಡಿಗಳೆ, ಬಳೆ ತೊಟ್ಟುಕೊಂಡಿದ್ದೇವೆಯೇ, ಸುಮ್ಮನೆ ಬಿಡಬಾರದು ಎಂದು ಕಾಲು ಕೆರೆದು ಜಗಳವಾಡುತ್ತಿದ್ದರು".*

*"ಆ ಜಾತಿಯಲ್ಲಿ ಇದ್ದ ಬೆಲೆ ಗೌರವ ಈ ಜಾತಿಗೆ ಬಂದ ಮೇಲೆ ಸಿಗಲಿಲ್ಲ. ಕೀಳಾಗಿ ಕಾಣುವುದನ್ನು ನೋಡಿ ನಿಜಕ್ಕೂ ನೋವಾಯಿತು".*

ಈಗಾಗಲೇ ಮೇಲೆ ಹೇಳಿರುವಂತೆ ಭಾರತವು ಇನ್ನೂ ಕಠಿಣ ಜಾತಿ ವ್ಯವಸ್ಥೆಯನ್ನು ಹೊಂದಿರುವ ಸಾಂಪ್ರದಾಯಿಕ ಸಮಾಜವಾಗಿದೆ. ಮದುವೆಗಳಲ್ಲಿ, ಸಂಗಾತಿಯ ಆಯ್ಕೆಯಲ್ಲಿ ಜಾತಿ ಮತ್ತು ಧರ್ಮ ಹೆಚ್ಚು ಪ್ರಮುಖ ಪಾತ್ರವಹಿಸುತ್ತದೆ. ಸ್ವಜಾತಿ/ಧರ್ಮವನ್ನು ಮೀರಿ ಮದುವೆಯಾಗಲು ಹೆಚ್ಚಿನ ಭಾರತೀಯರಿಗೆ ಯೋಚಿಸುವುದು ಕಷ್ಟ. ಆದರೆ ಇವುಗಳನ್ನು ಮೀರಿ ಯುಜವನರು ತಮ್ಮ ಒಲವು ಬದಲಾಯಿಸಿಕೊಂಡಿದ್ದಾರೆ ಎಂದು ಈ ಸಂಶೋಧನೆಯಿಂದ ತಿಳಿದು ಬಂದಿದೆ. ಈ ಆರಂಭವು ಅನೇಕೆ ಜನರಿಗೆ ಸ್ಪೂರ್ತಿದಾಯಕವೂ ಆಗಿದೆ.

- **ಸಾಮಾಜಿಕ ಬಹಿಷ್ಕಾರ**

2011 ರ ಜನಗಣತಿ ಪ್ರಕಾರ ಭಾರತದಲ್ಲಿ ಶೇ.5.8 ರಷ್ಟು ಮಾತ್ರ ಅಂತರ್ಜಾತಿ ವಿವಾಹವಾಗಿದೆ ಎಂದು ಹೇಳಲಾಗಿದೆ. ಇದು ಕಳೆದ 40 ವರ್ಷಗಳಿಂದಲೂ ಬದಲಾಗಿಲ್ಲ ಎಂದು ಜನಗಣತಿಯಲ್ಲಿ ಹೇಳಲಾಗಿದೆ. ಆದರೆ ಇದನ್ನು ಬದಲಾವಣೆಯ ಹಾದಿಗೆ ತರಲು ಒಂದಷ್ಟು ಜನ ಪ್ರಯತ್ನಿಸಿದ್ದಾರೆ ಮತ್ತು ಪ್ರಯತ್ನಿಸುತ್ತಿದ್ದಾರೆ ಕೂಡ. ಇದರ ನಡುವೆ ತಮಗೆ ಎದುರಾಗುವ ಒಂದಷ್ಟು ತೊಂದರೆ, ತೊಡಕುಗಳ ಬಗ್ಗೆಯೂ ತಮ್ಮ ಅನುಭವನನ್ನು ಹಂಚಿಕೊಂಡಿದ್ದಾರೆ. ಪ್ರೀತಿಸಿ ಮದುವೆಯಾದ ಕೆಲವರನ್ನು ಊರಿಂದ, ಸಮುದಾಯದಿಂದ, ಕುಟುಂಬದಿಂದ ಬಹಿಷ್ಕಾರ ಹಾಕುವ ಘೋರಪದ್ಧತಿಯ ಬಗ್ಗೆ ತಮ್ಮ ಅನುಭವಗಳನ್ನು ಹಂಚಿಕೊಂಡಿದ್ದಾರೆ:

*"ಲಂಬಾಣಿ ಜಾತಿಯವನಾದ ನಾನು ಮಾದಿಗ ಜಾತಿಯ ಚೈತ್ರಳನ್ನು (ಹೆಸರು ಬದಲಿಸಿದೆ) ಪ್ರೀತಿಸಿಯೇ ಮದುವೆಯಾಗಿ ನನ್ನ ಸಮುದಾಯದಿಂದ ಬಹಿಷ್ಕರಿಸಲ್ಪಟ್ಟಿದ್ದೇನೆ".*

*"ನನ್ನ ಸಮುದಾಯದಲ್ಲಿ ಬೇರೆ ಜಾತಿಯವರನ್ನ ಮದುವೆಯಾದವರು ಇದ್ದಾರೆ ಅವರೆಲ್ಲಾ ಸಮುದಾಯದ ಒಳಗೆ ಇದ್ದಾರೆ. ಯಾಕೆಂದರೆ ಅವರು ಮದುವೆಯಾಗಿರುವುದು ಮೇಲು ಜಾತಿಯಲ್ಲಿ. ನಾನು ಮಾದಿಗ ಜಾತಿಯಲ್ಲಿ ಮದುವೆಯಾದ ಕಾರಣಕ್ಕೆ ಸಮುದಾಯದಿಂದ ಬಹಿಷ್ಕಾರಿಸಲ್ಪಟ್ಟಿದ್ದೇನೆ. ಅವರು ಕೂಡ ಪ್ರೀತಿಸಿಯೇ ಮದುವೆ ಆದರು. ನಾನು ಕೂಡ ಪ್ರೀತಿಸಿಯೇ ಆದೆ ಅವರಿಗಿಲ್ಲದ ಬಹಿಷ್ಕಾರ ನನಗೆ ಮಾತ್ರವಿದೆ."*

*"ನಮ್ಮ ಮರ್ಯಾದೆಯನ್ನು ಹಾಳು ಮಾಡಿದೆ. ಅಲ್ಲದೆ ನಮ್ಮ ಸಂಪ್ರದಾಯ, ಧರ್ಮವನ್ನು ಮೀರಿ ಬೇರೆಯವರನ್ನು ಮದುವೆಯಾಗಿದ್ದಾಳೆ ಅವಳಿಗೂ ನಮಗೂ ಯಾವ ಸಂಬಂಧವೇ ಇಲ್ಲವೆಂದು ಇಂದಿಗೂ ದೂರವಾಗಿದ್ದಾರೆ".*

*"ತವರು ಮನೆಯವರು ಮತ್ತು ಸಂಬಂಧಿಕರು ದೂರವಾದರು ಎಂಬ ನೋವು, ಕೊರಗು ಯಾವಾಗಲೂ ಕಾಡುತ್ತಿರುತ್ತದೆ".*

*"ಸಂಭ್ರಮ ಹಂಚಿಕೊಳ್ಳಬೇಕಾದ ಆ ಹಬ್ಬದ ದಿನ ನಮ್ಮ ಬದುಕಿನ ಅತಿ ಅವಮಾನದಾಯಕ ಕರಾಳ ದಿನವಾಗಿತ್ತು. ಇಂದಿಗೂ ಇದೇ ಅವಮಾನವನ್ನು ಅದೇ ಕರಾಳ ದಿನವನ್ನು ಪ್ರತಿ ನಿತ್ಯವೂ ಕಳೆಯುತ್ತಿದ್ದೇವೆ".*

ಜಾತಿ ಮತ್ತು ಧರ್ಮವನ್ನು ಮೀರಿ ಮದುವೆಯಾದಾಗ ಕೆಲವರು ಬಹಿಷ್ಕಾರ ಹಾಕಿ ದೂರ ಮಾಡಿದರೆ. ಕೆಲವರು ಸಂಪೂರ್ಣವಾಗಿ ಮಾತು ನಿಲ್ಲಿಸಿದ್ದಾರೆ. ಅದರ ಬಗ್ಗೆಯೂ ತಮ್ಮ ಅನುಭವಗಳನ್ನು ಈ ಕೆಳಗಿನಂತೆ ಹೇಳಿಕೊಂಡಿದ್ದಾರೆ:

*"ಅಪ್ಪನಿಗೆ ಈ ವಿಷಯಗೊತ್ತಾದ ಮೇಲೆ 6 ತಿಂಗಳು ಮಾತನಾಡಿಸಲಿಲ್ಲ. ಮದುವೆ ಆದ ಮೇಲೆ ಸಂಪೂರ್ಣವಾಗಿ ಮಾತು ಬಿಟ್ಟೆ ಬಿಟ್ಟಿದ್ದಾರೆ".*

*"ಅಪ್ಪ, ಅಣ್ಣ ಮತ್ತು ನಮ್ಮ ಕುಟುಂಬದವರು ನಮ್ಮಿಂದದೂರವಾಗಿದ್ದಾರೆ. ಅದು ನನಗೆ ಬೇಸರ ಎನಿಸುತ್ತಿದೆ. ನಾನೇನು ಯಾರು ಮಾಡದಿರುವ ತಪ್ಪೇನು ಮಾಡಿದ್ದೇನಾ?, ಇದುವರೆಗೂ ಅವರು ಮಾತನಾಡಿಸುತ್ತಿಲ್ಲ".*

*"ನಮ್ಮನ್ನು ಬಿಟ್ಟು ಹೋದವಳು ಅವಳಿಗೂ ನಮಗೂ ಸಂಬಂಧವಿಲ್ಲ ಎಂದು ಕೈತೊಳೆದುಕೊಂಡರು. ಮೊದ ಮೊದಲು ಬೈಯುತ್ತಿದ್ದರು ನಾನು ತಪ್ಪು ಮಾಡಿದವಳಲ್ಲವೆ ಎಂದು ಸಹಿಸಿಕೊಂಡೆ".*

*"ಮದುವೆಯ ನಂತರ ನನ್ನ ಮನೆಯವರು ಸಂಪೂರ್ಣವಾಗಿ ನನ್ನ ಜತೆ ಸಂಪರ್ಕ ಮುರಿದರು. ನನಗೆ ಅಮ್ಮ, ಅಕ್ಕಂದಿರನ್ನು ನೋಡುವ ಆಸೆಯಾಗುತ್ತಿತ್ತು. ಆದರೆ ಈಗ ನಾನೇ ಮನಸ್ಸುಗಟ್ಟಿಮಾಡಿಕೊಂಡಿದ್ದೇನೆ. ಈಗ ನನಗೆ ನನ್ನಗಂಡ, ಮಕ್ಕಳು ಮತ್ತು ಅವರ ಮನೆಯವರೇ ನನ್ನ ಬದುಕು".*

ಈ ಮೇಲಿನ ಅನುಭವನಗಳನ್ನು ಗಮನಿಸಿದ ಮೇಲೆ ತಾವು ಇಷ್ಟಪಟ್ಟು ವಿವಾಹವಾದ ಒಂದು ಸಂತೃಪ್ತಿ ಇರುವುದು ಗಮನಕ್ಕೆ ಬರುತ್ತದೆ. ಪ್ರತಿಯೊಂದು ಜೀವಿಗೂ ತನ್ನ ಬದುಕಿನ ಕೆಲವು ನಿರ್ಧಾರಗಳು, ತನ್ನ ಆಯ್ಕೆಯೇ ಅವರ ಘನತೆಯ, ಆತ್ಮಾಭಿಮಾನದ ಪ್ರಶ್ನೆಯಾಗಿರುತ್ತದೆ. ಅದಕ್ಕಾಗಿ ಕೆಲಮೊಮ್ಮೆ ಜೀವನದಲ್ಲಿ ಎಷ್ಟೋ ಗಂಡಾಂತರಗಳನ್ನು ಎದುರಿಸುವ ಪ್ರಮೇಯ ಬಂದರೂ ಮಾನಸಿಕವಾಗಿ ಸಿದ್ಧವಾಗಿರಾಗುತ್ತಾರೆ. ಅಷ್ಟೇ ಅಲ್ಲ, ಬದುಕಿನಲ್ಲಿ ಪ್ರೀತಿಯ ವಿಷಯದಲ್ಲಿ ರಾಜಿಯಾಗಿದೆ, ತಾನು ಪ್ರೀತಿಸಿದವರನ್ನು ಕಷ್ಟಪಟ್ಟಾದರೂ ಪಡೆದುಕೊಂಡೆ ಎನ್ನುವಾಗಿನ ತೃಪ್ತಿ, ಪ್ರೀತಿಯ ಮೌಲ್ಯವನ್ನು ಎತ್ತಿಹಿಡಿಯುತ್ತದೆ.

ಆದರೆ ಅಂತರ್ಜಾತಿ ಅಥವಾ ಅಂತರ್ ಧರ್ಮದ ವಿವಾಹಗಳು ಸಮಾಜದಿಂದ ಸಾಕಷ್ಟು ಟೀಕೆಗಳನ್ನು, ನೋವುಗಳನ್ನು ಎದುರಿಸುತ್ತವೆ. ತಮ್ಮ ಜಾತಿ/ಧರ್ಮಕ್ಕೆ ಅವಮಾನಮಾಡಿದವರು ಎಂಬ ಕಳಂಕವನ್ನು ಕಟ್ಟಿ ಸಮುದಾಯದಿಂದ, ಸಂಬಂಧದಿಂದ ದೂರ ಮಾಡುತ್ತಾರೆ. ಆದರೆ ಪೇಮಿಗಳು ತಮ್ಮ ಇಷ್ಟದ ಬದುಕಿಗಾಗಿ ಹೋರಾಟ ಮಾಡಿ ಜಯಿಸುತ್ತಾರೆ ಎಂಬುದು ನಮಗೆ ತಿಳಿಯುತ್ತದೆ. ಕೆಲವು ಪೋಷಕರು ಮಕ್ಕಳ ಸಂಬಂಧವನ್ನು ಕಡಿದುಕೊಳ್ಳಲು ಮುಂದಾದರೆ ಇನ್ನೂ ಕೆಲವರು ಕುಟುಂಬದವರೆಲ್ಲರೂ ಸೇರಿ ಶಾಂತವಾಗಿ ಒಪ್ಪಿಕೊಂಡು ಅವರ ಪ್ರೀತಿಯನ್ನು ಗೌರವದಿಂದ ಸ್ವೀಕರಿಸುವ ವಿಶಾಲ ಮನಸ್ಸುಗಳೂ ಕೂಡ ಇವೆ ಎಂಬುದುನ್ನು ನಾವು ಗಮನಿಸಲೇ ಬೇಕಿದೆ.

➢ **ಕೆಳ ಮತ್ತು ಮೇಲು ಜಾತಿಯ ಮದುವೆಗಳ ಅನುಭವ**

ಜಾತಿ ಅನ್ನೋದು ಹುಟ್ಟಿನಿಂದ ಅಂಟಿಕೊಂಡಿರುತ್ತದೆ. ಜಾತಿಗೊಂದು ಕೆಲಸ ಹಾಗೂ ಜಾತಿ ಜಾತಿಯ ನಡುವೆಯೇ ಮದುವೆ ಆಗುತ್ತಾ ಬಂದಿದೆ. ಸುಮಾರು 2000 ವರ್ಷಕ್ಕೂ ಅಧಿಕ ಇತಿಹಾಸ ಹೊಂದಿರುವ ಈ ಜಾತಿ ಪದ್ಧತಿ ಗಟ್ಟಿಯಾಗಿ ನಮ್ಮ ಸಮಾಜದಲ್ಲಿ ತಳಊರಿದೆ. ಜಾತಿ ಎನ್ನುವುದು ಎಷ್ಟು ಪ್ರಭಾವಶಾಲಿ ವ್ಯವಸ್ಥೆ ಅಂದರೆ ಅಂತರ್ಜಾತಿ ಮದುವೆ ಆದ ದಂಪತಿಗಳು ಸಹ ಜಾತಿ ವ್ಯವಸ್ಥೆಯ ಭಾಗವಾಗುವಷ್ಟು!. ಜಾತಿಯನ್ನು ಬಿಟ್ಟು ಬದುಕಲಾಗದಷ್ಟು ಬೇರೂರುಬಿಟ್ಟಿದೆ. ಇತ್ತೀಚೆಗಂತೂ ಜಾತಿಗೊಂದು ಗಂಡು ಹೆಣ್ಣು ಹುಡುಕಿ ಕೊಡುವ ಸಂಸ್ಥೆಗಳು, ಮ್ಯಾಟ್ರಿಮೋನಿಗಳು, ಬ್ರೋಕರ್‌ಗಳೂ ಇದ್ದಾರೆ. ಸಾಮಾಜಿಕ ಮಾಧ್ಯಮಗಳಲ್ಲಿ, ಮುಖ್ಯವಾಹಿನಿಯ ಮಾಧ್ಯಮಗಳಲ್ಲಿ ತಮ್ಮದೇ ಜಾತಿಯ ಹೆಣ್ಣು, ಗಂಡು ಬೇಕೆಂದು ಜಾಹೀರಾತುಗಳನ್ನು ನೀಡುವಂತ ಹಂತಕ್ಕೂ ತಲುಪಾಗಿದೆ.

ಮಾನವಶಾಸ್ತ್ರಜ್ಞ ಲೂಯಿಸ್ ದುಮಾಂಟ್ ತನ್ನ ಹೋಮೊ ಹೈರಾರ್ಕಿಕಸ್ (Homo hierarchicus) ಪುಸ್ತಕದಲ್ಲಿ, "ಜಾತಿಯೊಂದು ಸಾಮಾಜಿಕ ವ್ಯವಸ್ಥೆ, ನಿರ್ದಿಷ್ಟವಾಗಿ ಗುರುತುಮಾಡಿರುವ, ವಿಂಗಡಿಸಿರುವ ಸಮುದಾಯಗಳು ಜಾತಿಯೊಳಗಿನ ಕಡ್ಡಾಯ ಮದುವೆಯ ಮೂಲಕ ಬಂದಿಗಳಾಗಿದ್ದು ಪ್ರತಿ ಸಮುದಾಯವು ಒಂದು ನಿರ್ದಿಷ್ಟ ಕೆಲಸವನ್ನು ಮಾಡುವುದು ಅಷ್ಟೇ ಅಲ್ಲದೆ ಪ್ರತಿ ಕೆಲಸವೂ ಶುದ್ಧ ಅಶುದ್ಧ ಎಂಬ ಮಾನದಂಡದ ಮೂಲಕ ಮೇಲೂ ಹಾಗೂ ಕೀಳು ಎಂದು ಶ್ರೇಣೀಕರಿಸಿರುವುದು" ಎಂದು ವಿವರಿಸುತ್ತಾರೆ. ಮುಂದುವರೆದು "ಸಮಾಜದ ಪ್ರತಿಯೊಬ್ಬರೂ ಈ ವ್ಯವಸ್ಥೆಯ ಭಾಗವಾಗಿದ್ದು ಎಲ್ಲಿಯೂ ಇದರಿಂದ ಬಿಡುಗಡೆ ಇಲ್ಲ". ಎಂದು ಹೇಳುತ್ತಾರೆ. ಹಾಗಾಗಿ ಜಾತಿ ವ್ಯವಸ್ಥೆಯ ನಾಶ, ಜಾತಿ ವ್ಯವಸ್ಥೆಯ ಪ್ರತಿಪಾದಿಸುವ ಧಾರ್ಮಿಕ ಕಲ್ಪನೆಗಳನ್ನು ನಾಶಪಡಿಸದೆ ಜಾತಿ ವಿನಾಶ ಸಾಧ್ಯವಿಲ್ಲ ಎಂಬುದು ಮನಗಾಣಬೇಕಿದೆ.

ಜಾತಿ, ಧರ್ಮದ ಚೌಕಟ್ಟಿನ ಎಲ್ಲೆಗಳನ್ನ ಮೀರಿ, ಗಡಿಗಳನ್ನು ಮೀರಿರುವ ಕೆಲವರು ನಮ್ಮ ಜೊತೆ ಅನುಭವಗಳನ್ನು ಹಂಚಿಕೊಂಡಿದ್ದಾರೆ. ಅದರಲ್ಲಿ ಮೇಲ್ಜಾತಿಯ ಪುರುಷರು ಕೆಳಜಾತಿಯ ಮಹಿಳೆಯರನ್ನು ಮದುವೆಯಾಗಿ ಅನುಭವ ಹಂಚಿಕೊಳ್ಳುವುದು ಸಾಮಾನ್ಯವಾಗಿರುತ್ತದೆ. ಆದರೆ ಇಲ್ಲಿ ಕೆಳಜಾತಿಯ ಪುರುಷರ ಅನುಭವಗಳು ಸಹ ಇವೆ. *"ಬೇರೆಯವರ ಜೀವನದ ಉದಾಹರಣೆ ಕೊಟ್ಟು ಹೇಳಿ ಅಂತರ್ಜಾತಿ ಮದುವೆಗಳ ಬಗ್ಗೆ ವಿವರಿಸಿದೆ. ಜಾತಿ ಮುಖ್ಯ ಆಗುವುದಿಲ್ಲ, ಚನ್ನಾಗಿ ಬದುಕುವುದು ಮುಖ್ಯ ಎಂದು ಹೇಳಿ ವಿವರಿಸಿದೆ..ಆದರೂ ಅಕ್ಕ ಒಪ್ಪಿಕೊಳ್ಳಲು ಸ್ವಲ್ಪ ಸಮಯ ಹಿಡಿಯಿತು"* ಎಂದು ಹೇಳುವ ಮೂಲಕ ತಮ್ಮ ಅನುಭವವನ್ನು ಹೇಳಿಕೊಂಡಿದ್ದಾರೆ. ಇನ್ನೂ ಕೆಲವರು ಹೇಳಿರುವಂತೆ:

*"ಮದುವೆಗೆ ಜಾತಿ ಮುಖ್ಯವಲ್ಲ. ಅವರವರಿಗೆ ಇಷ್ಟವಾದ ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುವುದು ಸೂಕ್ತ. ಪ್ರೀತಿಯಾದ ಮೇಲೆ ತಾನೇ ಅವರ ಜಾತಿಗೊತ್ತಾಗೋದು, ಹಾಗಾಗಿ ಜಾತಿ ಮುಖ್ಯವೇ ಅಲ್ಲ. ಜಾತಿ ಕೇಳಿ ಯಾರೂ ಪ್ರೀತಿ ಮಾಡುವುದಿಲ್ಲ. ಪ್ರೀತಿಯ ಎದುರಿಗೆ ಜಾತಿ ಬರುವುದಿಲ್ಲ. ಎಲ್ಲಕ್ಕಿಂತಲೂ ಪರಸ್ಪರ ಅರ್ಥಮಾಡಿಕೊಳ್ಳುವುದು ಮುಖ್ಯ".*

*"ನಾನು ಹೇಳಿದ ಕೂಡಲೇ "ಒಂದೇಜಾತಿಯ?" ಅಂತ ಕೇಳಿದ್ರು, "ಇಲ್ಲ ನಮಗಿಂತಲೂ ಸ್ವಲ್ಪ ಮೇಲೆಯೇ" ಅಂತಹೇಳಿದೆ. ಅದರೂ ನಮ್ಮ ಜಾತಿಯೇ ಆಗಬೇಕಿತ್ತು ಅಂತ ಹೇಳಿದರು."*

*"ಮೊದಮೊದಲಿಗೆ ನನ್ನಲ್ಲಿ ಮಾತಾಡದೆ ಇದ್ದಂತಹ ಎಷ್ಟೋ ವ್ಯಕ್ತಿಗಳು ಈಗ ನನ್ನ ಜಾತಿಯನ್ನೆ ಮರೆತಂತೆ ಅವರಾಗೆ ಬಹಳ ಆತ್ಮೀಯತೆಯಿಂದ ಮಾತಾಡುತ್ತಾರೆ. ಮನೆಗಳಿಗೆ ಅಹ್ವಾನಿಸುತ್ತಾರೆ ಕೂಡ".*

"ಕೆಲವು ಸಮುದಾಯಗಳಲ್ಲಿ ರಕ್ತಸಂಬಂಧದಲ್ಲಿ ವಿವಾಹವನ್ನು ತಪ್ಪಿಸಲು ಜಾತಿಯನ್ನು ಗೋತ್ರಗಳಾಗಿ ವಿಂಗಡಿಸಲಾಗಿದೆ. ಆಗ ಸಗೋತ್ರ ವಿವಾಹದ ವಿರುದ್ಧ ಅಷ್ಟೇ ಕಟ್ಟೆಚ್ಚರದ ಕಾವಲು ಕಾಯಲಾಗುತ್ತದೆ. ನಿಯಮವನ್ನು ಉಲ್ಲಂಘಿಸಿದವರ ಶಿರಚ್ಛೇದನ ಹಾಗೂ ಹತ್ಯೆಗಳನ್ನು ನಡೆಸಲು ಸಮುದಾಯದ ಮುಖ್ಯಸ್ಥರಿಂದ ಸಮ್ಮತಿಯೂ ದೊರೆಯುತ್ತದೆ. ಭಾರತದ ಪ್ರತಿಯೊಂದು ಪ್ರಾಂತವೂ, ಜಾತಿ ಆಧಾರಿತ ಕ್ರೌರ್ಯದಲ್ಲಿ ತನ್ನದೇ ಆದ ವಿಶಿಷ್ಟ ರೂಪ ವನ್ನು ಅಳವಡಿಸಿಕೊಂಡಿದೆ. ದಕ್ಷಿಣ ಅಮೆರಿಕದ ಹಳೆಯ ಜಿಮ್ ಕ್ರೊ ಕಾನೂನಿಗಿಂತಲೂ ಘೋರವಾದ ಅಲಿಖಿತವಾದ ಸಂಹಿತೆಯೊಂದು ಚಾಲ್ತಿಯಲ್ಲಿದೆ" ಎಂದು ಅರುಂಧತಿ ರಾಯ್(2016) ಅಭಿಪ್ರಾಯಪಟ್ಟಿದ್ದಾರೆ. ಅದರಂತೆ ಅನೇಕ ಸಮಾಜಸುಧಾರಕರು ಜಾತಿವ್ಯವಸ್ಥೆಯ ನಿವಾರಣೆಗೆ ಪ್ರಯತ್ನ ನಡೆಸಿದ್ದಾರೆ. ಈ ದಿಸೆಯಲ್ಲಿ ಪ್ರಥಮ ಪ್ರಯತ್ನ ನಡೆಸಿದ ಮಹಾನ್‌ವ್ಯಕ್ತಿ ಬುದ್ಧ. ಜಾತಿ ವ್ಯವಸ್ಥೆಯನ್ನು ಪ್ರಬಲವಾಗಿ ವಿರೋಧಿಸಿದ ಬುದ್ಧ ತನ್ನ ಧರ್ಮಕ್ಕೆ ಜಾತಿಯ ನಿಬಂಧನೆ ಹಾಕದೆ ಎಲ್ಲರನ್ನೂ ಸೇರಿಸಿಕೊಂಡ. ಬಸವಣ್ಣನವರು ಜಾತಿಯ ವಿರುದ್ಧ ಸೌಮ್ಯ ಯುದ್ಧವನ್ನೇ ಹೂಡಿದ್ದಲ್ಲದೆ, ಅಂತರಜಾತೀಯ ವಿವಾಹಗಳಿಗೆ ಪ್ರೋತ್ಸಾಹ ಕೊಟ್ಟರು. ಆದರೆ ನಮ್ಮಲ್ಲಿ ಬೌದ್ಧಧರ್ಮ ತನ್ನ ಪ್ರಭಾವವನ್ನು ಕಳೆದುಕೊಂಡು, ಪ್ರಚಾರಕ್ಕೆ ಬಾರದೇ ಇರುವಂತಹ ಪರಿಸ್ಥಿತಿ ಪಡೆದುಕೊಂಡದ್ದು ವಿಷಾದಪಡಬೇಕಾದ ಅಂಶ. ಬಸವಣ್ಣನವರ ಅನುಯಾಯಿಗಳು, ಕೂಡ ಮತ್ತೊಂದು ಪ್ರಬಲ ಜಾತಿಯಾಗಿ ಒಟ್ಟಾದರು. ಎಲ್ಲ ಜಾತಿಗಳಂತೆ ಅದು ಸಹ ತನ್ನದೇ ಆದ ಸಂಪ್ರದಾಯ ಸಂಬಂಧಗಳನ್ನು ರೂಪಿಸಿಕೊಂಡಿತು. ಎಷ್ಟೇ ಆದರೂ ಮನುಷ್ಯನಿಗೆ ಬೆನ್ನಿಗೆ ಬೇತಾಳವಾಗಿರುವ ಜಾತಿಯನ್ನು ದೂರ ಮಾಡಲು ಕಷ್ಟಸಾಧ್ಯವಾಗಿದೆ.

- **ಕುಟುಂಬಕ್ಕೆ ಅವಮಾನವಾಗುವ ಭಯ**

ಜಾತಿಯ ಕಟ್ಟುಪಾಡುಗಳನ್ನು ಮೀರಿ ಮದುವೆಯಾಗಲು ಯುವಜನರು ನಿರ್ಧಾರ ಮಾಡುತ್ತಿದ್ದಾರೆ. ನಿಜ ಆದರೆ ಅವರಿಗೆ ಜಾವಾಬ್ದಾರಿ ಇಲ್ಲ, ಕುಟುಂಬದ ಬಗ್ಗೆ ಕಾಳಜಿ ಇಲ್ಲ ಎಂದೇನಿಲ್ಲ. ಅವರೂ ತಮ್ಮಿಷ್ಟದ ಬಾಳ ಜೊತೆಗಾರ್ತಿ ಮತ್ತು ಜೊತೆಗಾರರನ್ನು ಆಯ್ಕೆಮಾಡಿಕೊಂಡರೂ ಸಾಮಾಜಿಕ ಜವಾಬ್ದಾರಿಯನ್ನ ಮರೆತಿಲ್ಲ. ಆದರೆ ಇದನ್ನು ಒಪ್ಪಿತ ಎಂದು ಭಾವಿಸದ ಈ ಸಮಾಜ ಮತ್ತು ಸಮುದಾಯದ ಮೌಲ್ಯಗಳಿಗೆ ಕುಟುಂಬವೂ ಅವರನ್ನೂ ದೂರತಳ್ಳುತ್ತದೆ. ಇದರ ಬಗ್ಗೆ ತಮ್ಮ ಅನುಭವಗಳಲ್ಲಿ ಹೇಳಿರುವುದನ್ನು ಗಮನಿಸಬಹುದು.

*"ತಂದೆ-ತಾಯಿಗೆ ನೋವು ತಂದಿದ್ದೇನೆ. ಮರ್ಯಾದೆ ಕೆಡುವಂತಹ ಕೆಲಸ ಮಾಡಿಬಿಟ್ಟಿದ್ದೇನಲ್ಲ ಎಂದು ನೊಂದುಕೊಂಡು ಅವರಿಗೆ ನೋವು ಮಾಡಬಾರದು ಎಂದು ಊರುಬಿಟ್ಟು ಕೋಲಾರಕ್ಕೆ ಸ್ನೇಹಿತನೊಂದಿಗೆ ಬಂದು ಕೆಲಸಕ್ಕೆ ಸೇರಿಕೊಂಡೆ. ನಾನು ಆಗ ಯಾವ ಫೋನು ಬಳಸದೆ ದೂರವಾಗಿದ್ದೆ".*

*"ನೆರೆ ಹೊರೆಯವರು ಮನಬಂದಂತೆ ಮಾತನಾಡಿಕೊಳ್ಳುತ್ತಿದ್ದರು. ಇದ್ದನ್ನು ಸಹಿಸದೆ ತಂದೆ-ತಾಯಿ ಊರುಬಿಟ್ಟು ಬೇರೆಡೆಗೆ ಹೋಗಿದ್ದರು. ಸ್ವಲ್ಪ ದಿನಗಳ ನಂತರ ಆದದ್ದು ಆಗಲಿ ಎಂದು ವಾಪಸ್ ಬಂದರು. ನಂತರ ಸಮಸ್ಯೆಗಳು, ಜಗಳಗಳು ಆಗಬಹುದು ಎಂದು ನಾವು ಹೈದರಬಾದ್‌ಗೆ ಹೋಗಿ 2 ವರ್ಷ ವಾಸವಾಗಿದ್ದು ನಂತರ ಸ್ವಂತ ಊರಿಗೆ ಬಂದೆವು".*

*"ಅಣ್ಣನೂ ಬೈದ. ಜೊತೆಗೆ ಇನ್ನು ಮನೆಗೆ ಬರಬೇಡ ಅಂತಕೂಡ ಹೇಳಿದ. ನನಗೆ ಜಗಳ ಮಾಡಲು ಇಷ್ಟವಿರಲಿಲ್ಲ, ನೀನು ಹೀಗೆ ಬೈಯುವತರಹ ಕೆಟ್ಟ ಕೆಲಸ ನಾನೇನೂ ಮಾಡಿಲ್ಲ. ಮನೆಯಲ್ಲಿ ಎಲ್ಲರ ಹತ್ತಿರನೂ ಪ್ರೀತಿಯ ವಿಷಯ ಹೇಳಿದೆ, ನೀವು ಒಪ್ಪಿಲ್ಲ ಹಾಗಾಗಿ ನಾನು ಈ ನಿರ್ಧಾರ ಮಾಡಿದೆ"*

ಹೀಗೆ ಕುಟುಂಬದ ಒಪ್ಪಿಗೆ ಇಲ್ಲದೆ ಮದುವೆಯಾದವರು ತಮ್ಮ ಅನುಭವಗಳನ್ನು ಹೇಳಿಕೊಂಡಿದ್ದಾರೆ. ಆದರೆ ತಮ್ಮ ಇಷ್ಟಗಳನ್ನು ಹೇಳಿಕೊಳ್ಳಲು ಯುವಜನರಿಗೆ ಅವಕಾಶಗಳಿದ್ದಾಗ ಮತ್ತು ಅವರು ತಮ್ಮ ಇಷ್ಟಗಳನ್ನು ಹೇಳಿಕೊಂಡಾಗ

ಅವರಿಗೆ ಪೋಷಕರು ಬೆಂಬಲಿಸಿದಾಗ ಮತ್ತಷ್ಟು ಬದಲಾವಣೆಗಳಾಗಬಹುದು ಎಂಬುದನ್ನು ಯುವಜನರು ಅಭಿಪ್ರಾಯಪಟ್ಟಿದ್ದಾರೆ.

- **ಜಾತಿ ಮತ್ತು ಧರ್ಮದ ಸ್ವೀಕಾರ**

ಜಾತಿ ವ್ಯವಸ್ಥೆಯ ನಿರ್ಮೂಲನೆಗೆ ಸೂಚಿಸುವ ಪರಿಹಾರಗಳಲ್ಲಿ ಅಂತರ್ಜಾತಿಯ ವಿವಾಹವೂ ಒಂದು. ಆದರೆ ಎಷ್ಟೋ ಸಂದರ್ಭಗಳಲ್ಲಿ ಅಂತರ್ಜಾತಿಯ ಮತ್ತು ಅಂತರ್ ಧರ್ಮೀಯ ಪ್ರೇಮಗಳು ಜಾತಿ, ಧರ್ಮದ ಪದಗೊತ್ತಿಲ್ಲದೆ ನಡೆದಿರುತ್ತವೆ. ಆದರೆ ಈ ರೀತಿ ಮದುವೆಯಾದವರಿಗೆ ಜಾತಿಯ ಭಾವನೆಗಳು ಇರುವುದಿಲ್ಲವೆಂದು ಹೇಳಲು ಬರುವುದಿಲ್ಲ. ತಮ್ಮ ಸಂಗಾತಿಗಳನ್ನು ಆರಿಸಿಕೊಳ್ಳುವಾಗ ಜಾತಿಯನ್ನು ಅವರು ಲೆಕ್ಕಿಸಿಲ್ಲ ಎಂಬುದು ಮಾತ್ರ ನಿಜ. ಮುಂದೆ ಬಹುಪಾಲು ಇಂತಹ ಮದುವೆಗಳಲ್ಲಿ ವಧುವು ವರನ ಅಥವಾ ವರನು ವಧುವಿನ ಜಾತಿಯನ್ನೋ, ಧರ್ಮವನ್ನೋ ಸ್ವೀಕರಿಸುತ್ತಾರೆ. ಮೂವತ್ತಕ್ಕೂ ಹೆಚ್ಚು ಶತಕಗಳಿಂದ ಬೇರುಬಿಟ್ಟಿರುವ ಈ ಸಾಮಾಜಿಕ ವ್ಯವಸ್ಥೆಗೆ ಶೀಘ್ರ ಪರಿಹಾರ ಅಸಾಧ್ಯ. ಸಮಾಜದ ಮೇಲೆ ವಿನಾಶಕಾರಿ ಪ್ರಭಾವವನ್ನು ಬೀರಿರುವ ಈ ಜಾತಿ ವ್ಯವಸ್ಥೆಯ ನಿರ್ಮೂಲನಕ್ಕೆ ಶ್ರಮಿಸುವುದು ಎಲ್ಲರ ಜಾವಾಬ್ದಾರಿ ಕೂಡ. ಆದರೆ ಮತಾಂತರವೂ ಯಾವಹಂತದ ಶ್ರೇಣೀಕೃತಗೊಂಡಿದೆ ಎಂದರೆ ಮಹಿಳೆಯರೇ ಗಂಡಿನ ಜಾತಿ, ಧರ್ಮಕ್ಕೆ ಸೇರಬೇಕೆನ್ನುವಷ್ಟು!. ತನ್ನ ಅಸ್ತಿತ್ವದ ಪ್ರಶ್ನೆಯಾಗಿ ಕಾಡುವಷ್ಟು ಎನ್ನುವುದು ನೋವಿನಸಂಗತಿ. ಇದರ ಬಗ್ಗೆ ಕೆಲ ಯುವಜನರು ಹೇಳಿರುವುದೇನೆಂದರೆ:

*"ನಾನು ಹಿಂದುವಾಗಿ ಬದಲಾದೆ. ಇದು ನನಗೆ ಇಷ್ಟವಿರಲಿಲ್ಲ. ಎಲ್ಲೋ ಒಳಗೆ ಬಹಳ ಬೇಸರವಾಯಿತು. ಮತ್ತೆ ರುಕ್ಸಾನ ಎಲ್ಲಿ ಮರೆಯಾದಳೋ ಗೊತ್ತಾಗಲಿಲ್ಲ".*

*"ಮದುವೆಯಾದ ಮೇಲೆ ದೀಪಾವಳಿ ಹಬ್ಬಕ್ಕೆ ಹೋಗಿದ್ದಾಗ ಮುರುಘ ಮಠಕ್ಕೆಕರೆದುಕೊಂಡು ಹೋಗಿ ಲಿಂಗ ದೀಕ್ಷೆ ಕೊಡಿಸಿದರು. ಗಂಡ ಲಿಂಗ ತೊಳೆದ ನೀರು ಕುಡಿಸಿದರು ಅಂದಿಗೆ ಲಿಂಗಾಯ್ತಳಾದೆ".*

*"ಮುಬೀನ ಈಗ ಕುಸುಮಳಾಗಿದ್ದಾಳೆ ನಮ್ಮ ಜಾತಿಯ ಹುಡುಗಿಯಾಗಿ ತಿಂಗಳಿಗೊಂದೊಂದು ಬರುವ ಎಲ್ಲಾ ಹಬ್ಬಗಳನ್ನು ವಿಶೇಷವಾಗಿ ಮಾಡುತ್ತಾಳೆ. ನಾನು ಮುಸ್ಲೀಮ್ ಧರ್ಮಕ್ಕೆ ಮತಾಂತರವಾಗಿದ್ದಿದ್ದರೆ ಅವರ ಕುಟುಂಬದವರ ಜೊತೆ ಮುಜಫರ್‌ನಾಗಿ ನಗರದಲ್ಲಿ ಬದುಕುತ್ತಿದ್ದೆ".*

ಹೀಗೆ ಹೆಣ್ಣುಮಕ್ಕಳು ಮತಾಂತರ ವಾಗುವುದರೊಂದಿಗೆ ತಮ್ಮ ಅಸ್ತಿತ್ವವನ್ನು ಕಳೆದುಕೊಂಡ ನೋವಿನಲ್ಲಿಯೂ ಬಹುತೇಕರಿದ್ದಾರೆ. ಮತಾಂತರವಾದ ತಕ್ಷಣ, ತಮ್ಮ ಆಚಾರ, ವಿಚಾರಗಳನ್ನು ಪಾಲಿಸಿದ ತಕ್ಷಣ ಅವರನ್ನು ಒಪ್ಪಿಕೊಳ್ಳುವುದು, ತನ್ನ ಜಾತಿ ಮತ್ತು ಧರ್ಮದವನ್ನಾಗಿ ಮಾಡಿಕೊಳ್ಳುವುದು ಪ್ರೇಮವಿವಾಹದಲ್ಲಿ ಸಹಜವಾಗಿಬಿಟ್ಟಿದೆ.

- **ಕುಟುಂಬದ ಸ್ವೀಕಾರ ಮತ್ತು ಬೆಂಬಲ**

*"ಪ್ರೀತಿ ಹುಟ್ಟುವಂತಹ ಸಂದರ್ಭದಲ್ಲಿ ಜಾತಿ ವಿಷಯವೇ ಆಗಿರಲಿಲ್ಲ. ಮದುವೆಯ ವಿಷಯಕ್ಕೆ ಬಂದಾಗ ಅಮ್ಮನ ಹೆದರಿಕೆ ತುಂಬಾನೆ ಇತ್ತು. ಆದರೆ ನನ್ನ ಅಕ್ಕ, ಅಪ್ಪ ಎಲ್ಲರೂ ಬೆಂಬಲಕ್ಕೆ ನಿಂತಿದ್ದರು"* ಎಂದು ಹೇಳುವ ಮೂಲಕ ತಮ್ಮ ಮದುವೆಗೆ ಕುಟುಂಬದ ಸ್ವೀಕಾರ, ಸಹಕಾರ ಮತ್ತು ಬೆಂಬಲವನ್ನೂ ಪಡೆದಿದ್ದಾರೆ. ಕೆಲವು ಕುಟುಂಬಗಳು ಸಾಮಾಜಿಕ ಕಟ್ಟುಪಾಡುಗಳಿಗೆ ಜೋತು ಬೀಳದೆ, ತಮ್ಮ ಮಕ್ಕಳ ಭವಿಷ್ಯದ ಬಗ್ಗೆ ಚಿಂತಿಸಿ ಬೆಂಬಲಿಸಿದ್ದಾರೆ. ಕೆಲವು ಕುಟುಂಬಗಳಲ್ಲಿ ಪೋಷಕರಿಗೆ ಒಪ್ಪಿಗೆ ಇದ್ದರೂ ಸಂಬಂಧಿಕರ ಒತ್ತಡದ ಕಾರಣಕ್ಕೆ ಎಲ್ಲೋ ಒಂದು ಕಡೆ ಆರಂಭದಲ್ಲಿ ಹಿಂದೆ ಸರೆದು ಮತ್ತೆ ಒಪ್ಪಿಕೊಂಡಿರುವ ಉದಹಾರಣೆಗಳೂ ಇವೆ. *"ನನ್ನ ಅಮ್ಮ ಒಂದು ರೀತಿಯಲ್ಲಿ ಒಪ್ಪಿಕೊಂಡು ಸುಮ್ಮನಾಗುತ್ತಿದ್ದ ಸಮಯದಲ್ಲಿ, ಸಂಬಂಧಿಕರು ಅವರ ತಲೆಯಲ್ಲಿ ಹುಳ ಬಿಟ್ಟು ತೊಂದರೆ ಮಾಡುತ್ತಿದ್ದರು. ಕೊನೆ*

*ಕ್ಷಣದವರೆಗೂ ಇಷ್ಟವಿಲ್ಲವೆಂದೇ ಹೇಳಿ ಆಕ್ಷೇಪಿಸುತ್ತಿದ್ದರು, ಕ್ರಮೇಣ ಒಪ್ಪಿಕೊಂಡರು"* ಎಂದು ಹೇಳಿಕೊಂಡಿದ್ದಾರೆ. *ಮದುವೆಗೂ ಮುಂಚೆ ಸರಿಯಾಗಿಯೋಚನೆ ಮಾಡಿ ನಿರ್ಧಾರಗಳನ್ನು ತೆಗೆದುಕೊಳ್ಳಬೇಕು. ಆದಷ್ಟು ತಂದೆ ತಾಯಿಗಳನ್ನು ಒಪ್ಪಿಸಿ ಮದುವೆಯಾಗಬೇಕು. ಎಲ್ಲರೂ ಒಟ್ಟಿಗೆ ಬಾಳಬೇಕು ಎಂದು ಎಲ್ಲರಿಗೂ ಆಸೆ ಇರುತ್ತದೆ"* . ಆದರೆ ಕೆಲವು ಸಲ ನಮಗೂ ನಿಧಾರಗಳನ್ನು ತೆಗೆದುಕೊಳ್ಳುವಾಗ ಕುಟುಂಬದ ಬೆಂಬಲದ ಪ್ರಶ್ನೆ ಬಂದಾಗ ಭಯವಾಗಿ ಅವರಿಂದ ಮುಚ್ಚಿಡುವ ಸಂದರ್ಭಗಳೂ ಬರುತ್ತವೆ. ಕುಟುಂಬದಲ್ಲಿ ಮಕ್ಕಳಿಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವ ಅವಕಾಶಗಳು ಇದ್ದಾಗ ಯುವಜನರು ಯಾವುದೇ ನಿರ್ಧಾರಗಳನ್ನು ಹಂಚಿಕೊಳ್ಳಲು ಹಿಂಜರೆಯುವುದಿಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ.

*"ನಮ್ಮ ಪ್ರೇಮದ ಕುರಿತು ಮನೆಯಲ್ಲಿ ತಿಳಿದಾಗ ಬಹಳ ಜೋರಾಗಿ ವಿರೋಧಿಸಿದರು. ಆದರೆ ನನ್ನ ಗಂಡನ ಮನೆಯವರು ಮೊದಲಿಗೆ ಸ್ವಲ್ಪ ಅಸಮಾಧಾನ ತೋರಿಸಿದರೂ ಮತ್ತೆ ನನ್ನನ್ನು ಪ್ರೀತಿಯಿಂದ, ಗೌರವದಿಂದ ತಮ್ಮೊಂದಿಗೆ ಸೇರಿಸಿಕೊಂಡರು. ನನ್ನ ಅತ್ತೆ ನಮ್ಮ ಮದುವೆಯ ರಿಸ್ಪೆಷನ್‌ಗೆ ಅವರ ಒಡವೆಗಳನ್ನು ಗಿರವಿ ಇಟ್ಟು ಹಣ ಮಗನಿಗೆ ನೀಡಿದ್ದರು".* ಮಕ್ಕಳ ಕನಸ್ಸುಗಳಿಗೆ ಕಣ್ಣಾಗುವ ಕುಟುಂಬದ ಬಗ್ಗೆ ಬಹುತೇಕ ಯುವಜನರು ಖುಷಿಪಟ್ಟಿದ್ದಾರೆ. ತಮ್ಮ ನಿರ್ಧಾರಗಳಿಗೆ ಬೆಂಬಲ, ಪ್ರೋತ್ಸಾಹ ಕೊಡುವಂತೆ ಮನವಿಯೂ ಮಾಡಿದ್ದಾರೆ.

- **ಆರ್ಥಿಕ ಮತ್ತು ಬದುಕುವ ಸ್ವಾತಂತ್ರ್ಯ**

ಹೆಣ್ಣುಮಕ್ಕಳಿಗೆ ಆರ್ಥಿಕ ಸ್ವಾತಂತ್ರ ಸಿಗುವುದು ಇಂದಿಗೂ ಬಹುತೇಕ ಕುಟುಂಬಗಳಲ್ಲಿ ಕಷ್ಟ. ಹೆಣ್ಣು ಸದಾ ಗಂಡಿನ ಕೈಕೆಳಗೆ ಇರಬೇಕು ಎಂದು ಈ ಸಮಾಜದಲ್ಲಿ ರೂಢಿಗತವಾಗಿ ಮಾಡಲಾಗಿದೆ. ಅದರಲ್ಲೂ ಮದುವೆ ನಂತರ ಹೆಣ್ಣು ಪ್ರತಿಹಂತದಲ್ಲೂ ಗಂಡನ ಅಡಿಯಾಳಾಗಿರಬೇಕು. ಏನೇ ಬೇಕು ಎಂದರೆ ಗಂಡನಿಂದಲೇ ಪಡೆಯಬೇಕು. ಒಂದು ಪಕ್ಷ ಹೆಣ್ಣು ದುಡಿಯುತ್ತಿದ್ದರೂ ಬಂದ ಸಂಬಳವನ್ನು ಗಂಡಿಗೆ ತಂದು ಕೊಡಬೇಕು. ಹೀಗೆ ಅನೇಕ ನಿಯಮಗಳು ಸಮಾಜದಲ್ಲಿವೆ. ಆದರೆ ಇತ್ತೀಚೆಗೆ ಇದು ಸ್ವಲ್ಪಮಟ್ಟಿನ ಬದಲಾವಣೆಯಾಗುತ್ತಿದೆ. ಮಹಿಳೆಯರ ಆರ್ಥಿಕ ಸ್ವಾತಂತ್ರ್ಯದ ಬಗ್ಗೆ ಹೆಚ್ಚು ಚರ್ಚೆಗಳೂ ಆಗುತ್ತಿದೆ. ನಾಲ್ಕುಗೋಡೆಯೊಳಗೆ ತನ್ನ ಬದುಕು ಬದುಕಬೇಕೆಂಬ ನಿಯಮವನ್ನು ಹೊಡೆದು ಸ್ವಂತಂತ್ರ್ಯವಾಗಿ, ತಮ್ಮಿಷ್ಟದಂತೆ ಬದುಕುತ್ತಿದ್ದಾರೆ. ಇದಕ್ಕೆ ಪೂರಕವಾಗಿ ಸಂವಿಧಾನದಲ್ಲಿಯೂ ಅನೇಕ ಕಾನೂನು, ಹಕ್ಕುಗಳನ್ನು ನೀಡಲಾಗಿದೆ.

ಪ್ರೀತಿಸಿ ಮದುವೆಯಾದ ಬಹುತೇಕ ಮಹಿಳೆಯರಿಗೆ ಆರ್ಥಿಕ ಸ್ವಾತಂತ್ರ್ಯ ಮತ್ತು ತಮ್ಮಿಷ್ಟದ ಆಯ್ಕೆಯ ಬದುಕು ಸಿಕ್ಕಿದೆ. ಇದಕ್ಕೆ ಬಹುಮುಖ್ಯ ಕಾರಣ ತಾವು ಮಾಡುವ ಕೆಲಸ, ಸಂಪಾದನೆ. ಆರ್ಥಿಕವಾಗಿ ಸ್ವಾತಂತ್ರ್ಯರಾಗಬೇಕಾದರೆ ಇಬ್ಬರೂ ದುಡಿಯಬೇಕಾಗುತ್ತದೆ. ಹಣ ಸಂಪಾದನೆಯಿಂದ ನೆಮ್ಮದಿಯ ಬದುಕು, ನಮ್ಮಿಷ್ಟದ ಬದುಕು ಸಿಗುವುದು ಎಂದು ತಮ್ಮ ಅನುಭವಗಳನ್ನು ಹೇಳಿಕೊಂಡಿದ್ದಾರೆ:

*"ಮದುವೆಯ ನಂತರ ಇನ್ನೂ ಫ್ರೀ ಆದೆ. ನನಗೆ ಯಾವುದೇ ನಿರ್ಬಂಧ ಹೇರಲಿಲ್ಲ, ಮದುವೆಯ ನಂತರ ನನ್ನ ಆಸಕ್ತಿ ಇದ್ದಂತಹ ಬಿ.ಬಿ.ಎ ಕೋರ್ಸು ಮಾಡಿದೆ".*

*"ಆರ್ಥಿಕವಾಗಿ ಸದೃಢವಾಗಿರುವುದು ಮುಂದಿನ ಭವಿಷ್ಯ ಕಟ್ಟಿಕೊಳ್ಳಲು ಸಹಾಯವಾಗುತ್ತದೆ".*

*"ನಾನು ಮದುವೆಯಾಗಿ ಬಂದಾಗಿನಿಂದ ಈ ಕಟುಂಬದಲ್ಲಿ ಆರ್ಥಿಕವಾಗಿ ಉತ್ತಮ ಸ್ಥಿತಿಗೆ ಬಂದೆವು".*

*"ನಾವೀಗ ಮನೆ ಕಟ್ಟಿಕೊಂಡಿದ್ದೇವೆ. ಇಬ್ಬರು ಹೆಣ್ಣುಮಕ್ಕಳು ಇದ್ದಾರೆ. ಅವರನ್ನು ಚೆನ್ನಾಗಿ ಓದಿಸಬೇಕು. ಅವರ ಕಾಲಿನ ಮೇಲೆ ನಿಲ್ಲುವಂತೆ ಮಾಡಬೇಕು. ಅದೇ ನನ್ನ ಕನಸು"* ಎಂದು ಹೇಳಿಕೊಂಡಿದ್ದಾರೆ.

- **ದಂಪತಿಗಳ ನಡುವಿನ ಅನ್ಯೋನ್ಯತೆ**

*"ನಾನು ಕೂಡ ಅವರ ಹಬ್ಬ ಆಚರಣೆಗಳಂದು ಪ್ರಾರ್ಥನೆ, ಪೂಜೆ ಇಲ್ಲದಿದ್ದರೂ ವಿಶೇಷ ಅಡುಗೆ ಊಟಕ್ಕೆ ವ್ಯವಸ್ಥೆ ಮಾಡುತ್ತೇನೆ. ಅವರದ್ದೇ ರುಚಿಯ ಅಡುಗೆ ಮಾಡಿ ತಿನ್ನುತ್ತೇವೆ. ಆದರೆ ದೇವರಿಗೆ ಬಲಿಕೊಟ್ಟ ಮಾಂಸವನ್ನು ಊಟ ಮಾಡುವುದ್ದಿಲ್ಲ. ಅವರ ಸಮುದಾಯದಲ್ಲಿ ಅದು ನಂಬಿಕೆ ಇದೆ. ಅಲಾಲ್ ಮಾಡಿದ ಮಾಂಸ ಮಾತ್ರ ಸ್ವೀಕರಿಸುತ್ತಾರೆ ಅದು ಎಲ್ಲೋ ಒಂದು ಕಡೆ ಅವರಿಗೂ ಮನಸ್ಸು ತಡೆಯುತ್ತದೆ. ಅದರ ಬಗ್ಗೆ ನನಗೇನು ಅಭ್ಯಂತರವಿಲ್ಲ".*

ಕಷ್ಟ–ಸುಖಗಳನ್ನು ಅರಿತು ಜೀವನ ನಡೆಸಬೇಕು. ನಂಬಿಕೆಯಿದ್ದರೆ ಜೀವನ ಸುಖವಾಗಿರುತ್ತದೆ ಎಂದು ಬಹುತೇಕ ನಮ್ಮ ಹಿರಿಯರು ನಂಬಿದ್ದಾರೆ. ಅದನ್ನು ನಾವುಗಳೂ ಕೂಡ ಪಾಲಿಸಿಕೊಂಡು ಬರುತ್ತಿದ್ದೇವೆ. ಅದರಲ್ಲೂ ಬಹುತ್ವವನ್ನು ಪಾಲಿಸುತ್ತಾ, ಭಿನ್ನತೆಗಳನ್ನು ಗೌರವಿಸುತ್ತಾ ಜೊತೆಯಾಗುವುದು ನಂಬಿಕೆಗೆ, ಪ್ರೀತಿಗೆ ಮತ್ತಷ್ಟು ಬಲ ತಂದುಕೊಡುತ್ತದೆ. ಅದನ್ನು ಬಹುತೇಕ ಪ್ರೇಮವಿವಾಹಗಳು ದೃಢಪಡಿಸಿವೆ.

*"ನಾವು ಕಷ್ಟ–ಸುಖಗಳನ್ನು ಸಮಾನಾಗಿ ಹಂಚಿಕೊಂಡು ಬದುಕುತ್ತಿದ್ದೇವೆ. ನಮ್ಮ ಜಾತಿಯವಳಾಗಿ ಬದುಕುತ್ತಿದ್ದಾಳೆ. ಹಟ್ಟಿಯ ಜನರೂ ನಮಗೆ ಬೇದ ಮಾಡಿದಂತೇನು ತೋರುತ್ತಿಲ್ಲ. ಅವರ ಮನೆಗಳ ಸಂಭ್ರಮಗಳಿಗೆ ನಾವು, ನಮ್ಮ ಮನೆಯ ಕಾರ್ಯಕ್ರಮಗಳಿಗೆ ಅವರು ಬಂದು ಹೋಗುತ್ತಾರೆ".* ಪರಸ್ಪರ ಅರ್ಥಮಾಡಿಕೊಂಡು, ಸಮಾನತೆಯನ್ನು ಬದುಕುತ್ತಿರುವುದರಿಂದ ನಮ್ಮ ಪ್ರೀತಿ ಯಶಸ್ಸು ಕಂಡಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಇವತ್ತಿನ ಸಂದರ್ಭದಲ್ಲಿ ಗಡಿಯಾಚೆಗಿನ ಮದುವೆಗಳನ್ನು ಬೆಂಬಲಿಸಿ, ಪ್ರೋತ್ಸಾಹಿಸದ ಹೊರತು ಯಶಸ್ವಿಯಾಗಲು ಕಷ್ಟ. ಇಂತಹ ನಿರ್ಧಾರಗಳಿಗೆ ಬೆಂಬಲವಾಗಿ ನಿಂತು ಧೈರ್ಯನೀಡಿ, ಜೊತೆಯಾಗಿ ನಿಲ್ಲುವುದು ಅತೀಮುಖ್ಯ. ಇಂತಹ ಸಾಹಸಕ್ಕೆ ಕೈ ಹಾಕುವುದು ಸ್ನೇಹಿತರು. ಬಹುತೇಕೆ ಪ್ರೀತಿ ಮದುವೆಗಳು ಸ್ನೇಹಿತರ ಬೆಂಬಲದಿಂದಲೇ, ಸಹಕಾರದಿಂದಲೇ ನಡೆದಿವೆ. ಇದರ ಬಗ್ಗೆ ನಮ್ಮ ಯುವಜನ ಹೇಳಿರುವಂತೆ:

*"ಹುಡುಗನ ಸ್ನೇಹಿತರು ತುಂಬಾ ಸಹಾಯ ಮಾಡಿದರು, ಊರಲ್ಲಿ ಮನೆಯವರು ಜಗಳ ಮಾಡಬಹುದು ಎಂಬ ಭಯದಿಂದ ಕೆಲವು ದಿನ ಊರಿಗೆ ಬರದೆ ಸಂಬಂಧಿಕರ ಮನೆಗೆ ಹೋಗಿ ಉಳಿದುಕೊಂಡೆವು ಸ್ವಲ್ಪ ದಿನಗಳ ನಂತರ ಊರಿಗೆ ಬಂದೆವು".*

*"ಬದುಕಿದ್ದರೆ ಅವನೊಂದಿಗೆ ಬದುಕಬೇಕು, ಇಲ್ಲವೆಂದರೆ ಸತ್ತು ಬಿಡುವ ಎಂದು ನಿರ್ಧರಿಸಿ ಬಂದಿದ್ದಳು. ಸ್ನೇಹಿತರು ಹಾಗೂ ಕೆಲಸ ಮಾಡುವ ಯಜಮಾನರ ಸಹಾಯದಿಂದ ಬೆಂಗಳೂರಿನಲ್ಲಿ ಉಳಿದೆವು".* ಹೀಗೆ ಯಾರಾದರೂ ಒಬ್ಬರು ಪ್ರೇಮವಿವಾಹವಾಗಲು ಸಹಕಾರ ಮಾಡುತ್ತಾರೆ.

- **ತಾಯಿ ಸ್ವಲ್ಪ ಭಿನ್ನ**

*"ಅವರ ತಾಯಿ ಯಾರಿಗೂ ಕಾಣದ ರೀತಿ ಹೊರಗಡೆ ಸಿಕ್ಕಿದ್ದಾಗ ಮಗಳೊಂದಿಗೆ ಮಾತನಾಡುತ್ತಾರೆ. ನಮ್ಮೂರು ಮುಸ್ಲೀಮರು ತುಂಬಾ ಒಳ್ಳೆಯವರು ಇಷ್ಟಾದರೂ ಕೂಡದ್ವೇಷ ಬೆಳೆಸಲಿಲ್ಲ. ಮರ್ಯಾದೆ ತೆಗೆದು ಹೋಗಿದ್ದಾಳೆ ಅವಳು ನಮಗೆ ಬೇಡ ಹೆಂಗಾದರು ಬದುಕಿಕೊಳ್ಳಲಿ ಎಂದು ಸುಮ್ಮನಾಗಿ ಬಿಟ್ಟಿದ್ದಾರೆ".* ತಾಯಿಯ ಮಮತೆಯನ್ನು ಮೆಚ್ಚಲೆ ಬೇಕು. ಮಕ್ಕಳು ಏನೇ ಮಾಡಿದರು ಅದನ್ನು ತಿದ್ದುವ, ಸರಿಮಾಡುವ, ಒಪ್ಪಿಕೊಳ್ಳುವ ಗುಣ ಬಹುತೇಕ ತಾಯಂದಿರಲ್ಲಿ ಇರುತ್ತದೆ. *"ನಾನಾಗಿಯೇ ಮಾತನಾಡಿಸಿದ್ದಕ್ಕೆ ನನ್ನ ತಾಯಿ ಕದ್ದುಮುಚ್ಚಿ ಮಾತನಾಡಿಸುತ್ತಾರೆ. ಅವರನ್ನು ಬಿಟ್ಟು ತವರು ಮನೆಯವರು ಯಾರೂ ಮಾತನಾಡಿಸುವುದ್ದಿಲ್ಲ".* ಈ ಮೂಲಕ ತಾಯಂದೀರು ತಮ್ಮ

ಕುಟುಂಬ ವರ್ಗದವರಿಗೆ ಗೊತ್ತಾಗದ ಹಾಗೆ ಮಕ್ಕಳ ಜೊತೆ ಒಡನಾಟ ಹೊಂದಿರುತ್ತಾರೆ ಎಂದು ಅಭಿಪ್ರಾಯಪಟ್ಟಿದ್ದಾರೆ.

- **ಸಾಂಸ್ಕೃತಿಕ ಭಿನ್ನತೆ ಮತ್ತು ಆಹಾರ ಸಂಸ್ಕೃತಿ**

ದೇಶದಲ್ಲಿ ಸಾವಿರಾರು ಆಚರಣೆಗಳು, ಸಂಸ್ಕೃತಿಗಳು ಇವೆ. ತಲೆತಲಾಂತರದಿಂದಲೂ ಸಂಪ್ರಾದಾಯಗಳನ್ನು ಪಾಲಿಸಿಕೊಂಡು ಬರುತ್ತಿರುವ ಪದ್ಧತಿಯೂ ಇದೆ. ಆದರೆ ಇವೆಲ್ಲವೂ ಎಲ್ಲೋ ಒಂದು ಕಡೆ ಸಾಮಾಜಿಕ ಚೌಕಟ್ಟಿನ ಬಂದಿಯನ್ನಾಗಿ ಮಾಡಲು ಅಸ್ತ್ರವನ್ನಾಗಿ ಬಳಸಲಾಗಿತ್ತಿದೆ. ಆದರೆ ಇದನ್ನು ಬಹುತ್ವದ ಆಧಾರದಲ್ಲಿ ಗೌರವಿಸುವ ಮನಸ್ಸುಗಳೂ ಇವೆ. *"ನನ್ನ ಗಂಡ ಶುದ್ಧ ಸಸ್ಯಹಾರಿ ಮತ್ತು ನಮ್ಮ ಮನೆಯಲ್ಲಿ ಎಲ್ಲರೂ ಮಾಂಸಹಾರಿಗಳು. ವಿಶೇಷವಾಗಿ ನನಗೆ ಮೀನು, ಮಾಂಸವೆಂದರೆ ತುಂಬಾ ಇಷ್ಟ. ನಾನು ಮದುವೆಯಾದ ನಂತರವೂ ಹಾಗೆ ಇದ್ದೇನೆ, ನನ್ನಲ್ಲೇನೂ ಬದಲಾವಣೆಗಳಾಗಲ್ಲಿ, ಈಗಲೂ ಮಾಂಸತಿನ್ನುತ್ತೇನೆ"* ಎಂದು ಒಬ್ಬರು ಹೇಳಿದರೆ, ಮತ್ತೊಬ್ಬರು *"ಈ ಮಾದಿಗ ಮನೆಯಲ್ಲಿ ಅವಳು ಕೂಡ ಮಾದಿಗಿತ್ತಿಯಾಗಿದ್ದಾಳೆ. ಅವರು ಮೊದಲು ದೊಡ್ಡ ಮಾಂಸ ತಿನ್ನುತ್ತಿರಲಿಲ್ಲ ಈಗ ಒಂದೇ ರೀತಿ ಊಟ, ಹಬ್ಬ, ಜಾತ್ರೆ, ಅಡುಗೆ, ದೇವರು, ವಾರಪೂಜೆ, ನಮಸ್ಕಾರ ನಡೆಯುತ್ತಿದೆ"* ಎಂದು ಅಭಿಪ್ರಾಯಪಟ್ಟಿದ್ದಾರೆ.

ಮತ್ತೊಬ್ಬರು *"ನಾವು ಆಚರಿಸುವ ದೇವರ ಪೂಜೆ, ಹಬ್ಬ ವ್ರತವನ್ನು ಆಚರಿಸುತ್ತಾಳೆ. ಆದರೂ ಮುಸ್ಲೀಮ್ ಸಮುದಾಯದ ವಿಶೇಷ ದಿನಗಳು ಬಂದಾಗ ಎಲ್ಲೋ ಒಂದು ಕಡೆ ತನ್ನವರನ್ನು ನೆನೆದು ಮರುಗುತ್ತಾಳೆ."*

*"ಅತ್ತೆ ಮನೆಗೆ ಹೋದಾಗ, ಅವರು ಲಿಂಗಾಯತರು ಆಗಿದ್ದರಿಂದ 2 ವರ್ಷ ಮಾಂಸ ತಿನ್ನುವುದನ್ನು ಬಿಟ್ಟೇಬಿಟ್ಟೆ. ಆದರೆ ನನ್ನ ಗಂಡ ನಮ್ಮ ಮನೆಗೆ ಬಂದಾಗಲೆಲ್ಲ ಮಾಂಸತಿನ್ನುತ್ತಿದ್ದರು. ಲಿಂಗ ಪೂಜೆ ಮಾಡಲಿಲ್ಲ ಹಾಗೆ ಧರಿಸಿಕೊಂಡಿದ್ದೇನೆ".* ಹೀಗೆ ಪರಸ್ಪರ ಒಬ್ಬರನ್ನೊಬ್ಬರ ಗೌರವಿಸುತ್ತಾ ಅರ್ಥಪೂರ್ಣವಾಗಿ ಬದುಕುತ್ತಿದ್ದಾರೆ ಎಂಬುದು ನಮ್ಮ ಸಂಶೋಧನೆಯಿಂದ ದೃಢಪಟ್ಟಿದೆ.

ಈ ಮೇಲಿನ ಮದುವೆಗಳನ್ನು ಗಮನಿಸಿದ ಮೇಲೆ ತಾವು ಇಷ್ಟಪಟ್ಟು ವಿವಾಹವಾದ ಒಂದು ಸಂತೃಪ್ತಿ ಗಮನಕ್ಕೆ ಬರುತ್ತದೆ. ಹಾಗಾಗಿ ಪ್ರತಿಯೊಂದು ಜೀವಿಗೂ ತನ್ನ ಬದುಕಿನ ಕೆಲವು ನಿರ್ಧಾರಗಳು, ತನ್ನ ಆಯ್ಕೆಯೇ ಅವರ ಘನತೆಯ, ಆತ್ಮಾಭಿಮಾನದ ಪ್ರಶ್ನೆಯಾಗಿರುತ್ತದೆ. ಅದಕ್ಕಾಗಿ ಕೆಲಮೊಮ್ಮೆ ಜೀವನದಲ್ಲಿ ಎಷ್ಟೋ ಗಂಡಾಂತರಗಳನ್ನು ಎದುರಿಸುವ ಪ್ರಮೇಯ ಬಂದರೂ ಮಾನಸಿಕವಾಗಿ ಸಿದ್ಧವಾಗಿರಾಗುತ್ತಾರೆ. ಅಷ್ಟೇ ಅಲ್ಲ, ಬದುಕಿನಲ್ಲಿ ಪ್ರೀತಿಯ ವಿಷಯದಲ್ಲಿ ರಾಜಿಯಾಗಿಲ್ಲ. ತಾನು ಪ್ರೀತಿಸಿದವರನ್ನು ಕಷ್ಟಪಟ್ಟಾದರೂ ಪಡೆದುಕೊಂಡೆ ಎನ್ನುವಾಗಿನ ತೃಪ್ತಿ ಪ್ರೀತಿಯ ಮೌಲ್ಯವನ್ನು ಎತ್ತಿಹಿಡಿಯುತ್ತದೆ.

ಒಂದೊಂದು ಜಾತಿ ಧರ್ಮದಲ್ಲಿ ಮದುವೆಯಾದವರನ್ನು ಸಾಮಾಜಿಕವಾಗಿ ಆಯಾ ಜಾತಿ ಧರ್ಮದ ಸ್ಥಾನಮಾನಕ್ಕೆ ಸಂಬಂಧಿಸಿದಂತೆ ಮಾನ್ಯತೆಗಳನ್ನ ಮಾಡಿದ್ದಾರೆ. ಉದಾ: ಕುರುಬ ಜಾತಿಯವರು ಲಿಂಗಾಯಿತ ಜಾತಿಯಲ್ಲಿ ಮದುವೆಯಾದರೆ ಅವರಿಗೆ ಆ ಜಾತಿಯ ಸ್ಥಾನಮಾನ ನೀಡಿ ಕುಟುಂಬ ಸಮಾಜ ಸಮಾರಂಭಗಳಿಗೆ ಬಂದು ಹೋಗಲು ಆದ್ಯತೆಗಳನ್ನ ನೀಡಲಾಗುತ್ತದೆ. ಇವರಿಗೆ ಕುಟುಂಬದಿಂದಾಗಲಿ ಸಮಾಜದಿಂದಾಗಲಿ ದೂರ ಉಳಿಸಲಾರರು. ಅದೇ ಜಾತಿಯ ಮತ್ತೊಬ್ಬರು ಮಾದಿಗ ಜಾತಿಯವರನ್ನು ಮದುವೆಯಾದಾಗ ಮಾದಿಗಜಾತಿಯ ಸ್ಥಾನಮಾನವನ್ನು ನೀಡಿ ಕುಟುಂಬ ಸಮುದಾಯದಿಂದ ಹೊರಗಿಡಲಾಗುತ್ತದೆ. ಮತ್ತೋರ್ವರು ಮುಸ್ಲೀಮ್ (ಅಥವಾ ಕ್ರಿಶ್ಚಿಯನ್ನಲ್ಲಿ) ಮದುಯಾಗಿದ್ದರೆ ಅವರನ್ನು ಊರಿನಿಂದಲೇ ದೂರವಿಟ್ಟು ಎಲ್ಲಾ ಸಂಪರ್ಕಗಳನ್ನು

ಕಡೆದುಕೊಳ್ಳುತ್ತಾರೆ. ಈರೀತಿಯಾಗಿ ಅಂತರ್ಜಾತಿಯಲ್ಲಿ ಮದುವೆಯಾದವರೂ ಕೂಡ ತನ್ನ ಸಂಬಂಧಿ ಕೆಳಜಾತಿ ಧರ್ಮದಲ್ಲಿ ಮದುವೆಯಾದರು ಎಂದು ಬೇಸರಗೊಂಡು ದೂರವಾಗಿರುವ ಉದಾಹರಣೆಗಳು ಸಾಕಷ್ಟಿವೆ.

ಎಲ್ಲಾ ದಂಪತಿಗಳ ಸಂದರ್ಶನದಲ್ಲೂ ಆರ್ಥಿಕವಾಗಿ ಸದೃಢವಾಗಿದ್ದರೆ ಬದುಕು ಕಟ್ಟಿಕೊಳ್ಳಲು ಧೈರ್ಯ ಬರುತ್ತದೆ ಎನ್ನುವುದನ್ನು ಒತ್ತಿಹೇಳಿದ್ದಾರೆ. ತಮ್ಮ ಅಸ್ಮಿತೆಗೆ ಧಕ್ಕೆಯಾದಾಗ ನೊಂದುಕೊಂಡು ಜೀವನದೊಂದಿಗೆ ರಾಜಿಮಾಡಿಕೊಂಡದ್ದು ನೋಡುವಾಗ, ಪರಸ್ಪರ ಸಂಗಾತಿಗಳ ಅಸಿತ್ಮೆಗೆ, ಅಸ್ಥಿತ್ವಕ್ಕೆ ಗೌರವಕೊಡುವುದು ಎಷ್ಟು ಮುಖ್ಯಎನ್ನುವುದು ಈ ಅಧ್ಯಯನದಲ್ಲಿ ಪ್ರತಿಫಲಿತವಾಗಿದೆ.

## 10.ಶಿಫಾರಸುಗಳು

- ಯುವಜನರ ಸಮಸ್ಯೆ, ಆತಂಕಗಳನ್ನು ಕುರಿತಾದ ಅಧ್ಯಯನಗಳು ಕಡಿಮೆ. ಇಂತಹ ಅಧ್ಯಯನಗಳು ವಿಸ್ತಾರವಾಗಿ ನಡೆಯಬೇಕು.
- ಸಂಗಾತಿಯ ಆಯ್ಕೆಯ ಹಕ್ಕು ಮಾನವ ಹಕ್ಕುಗಳಲ್ಲಿ ಒಂದು. ಅದು ಎಲ್ಲರಿಗೂ ಯಾವುದೇ ಅಡಚಣೆಯಿಲ್ಲದೆ, ಗೌರವದಿಂದ ದೊರಕಬೇಕು.
- ತಾಲೂಕು, ಹಳ್ಳಿಗಳಲ್ಲಿ ಯುವಜನರಿಗೆ ಮುಕ್ತ ಮಾತುಕತೆ, ತಮ್ಮ ಗೊಂದಲಗಳನ್ನು ನಿವಾರಿಸಲು ಯುವಜನ ಸ್ನೇಹಿ ಕೇಂದ್ರಗಳನ್ನು ನಿರ್ಮಿಸಬೇಕು.
- ಓಣಿ–ಓಣಿಗಳಲ್ಲಿ ಬೇರೆಬೇರೆ ರೀತಿಯ ಕೋಮು ಸೌಹಾರ್ದತೆಯ ಕುರಿತಾದ ಸಾಂಸ್ಕೃತಿಕ ಶಿಬಿರಗಳು ನಡೆಸಬೇಕು. ಜಾತಿ, ಧರ್ಮದಂತಹ ಪಿಡುಗುಗಳಿಂದ ಆಗುವ ಅನಾಹುತಗಳ ಬಗ್ಗೆ ಚರ್ಚಿಸಬೇಕು.
- ತಮ್ಮ ಅಭಿಪ್ರಾಯಗಳನ್ನು ಭಯವಿಲ್ಲದೆ ಹೇಳುವ ವೇದಿಕೆಗಳನ್ನು, ವಾತಾವರಣ ನಮ್ಮ ಶಿಕ್ಷಣ ಪದ್ಧತಿ ಸೃಷ್ಟಿಸಬೇಕು.
- ಯುವಜನರನ್ನು ಕೇಳಿಸುವ, ಅವರ ಸಮಸ್ಯೆಗಳನ್ನು ಆಲಿಸುವ ಒಂದು ವ್ಯವಸ್ಥೆ ಇರಬೇಕು.
- ಯುವಜನರ ಹಕ್ಕುಗಳು ಘೋಷಣೆಯಾಗಬೇಕು.
- ಸಂಗಾತಿಯ ಹಕ್ಕು ಯುವಜನರ ಹಕ್ಕುಗಳಲ್ಲಿ ಒಂದು ಎನ್ನುವುದು ಸಾರ್ವತ್ರಿಕವಾಗಿ ಗೊತ್ತಾಗಬೇಕು.
- ಹಾಗಾಗಿ ಯುವಜನ ಆಯೋಗವಿದ್ದರೆ ಇಂತಹ ಅಧ್ಯಯನ ಮಾಡಬಹುದು. ಹಾಗಾಗಿ ಯುವ ಜನರ ಆಯೋಗ ರಚನೆಯಾಗುವುದು ಬಹಳ ಮುಖ್ಯವಾಗಿದೆ.
- ಅಂತರ್ಜಾತಿ ಅಥವಾ ಅಂತರ್ ಧರ್ಮ ಮದುವೆಗಳು ಆಗುತ್ತಿದ್ದಲ್ಲಿ ಅವರಿಗೆ ಹಿಂಸೆ ದೌರ್ಜನ್ಯಗಳು ನಡೆಯದ ರೀತಿಯಲ್ಲಿ ಸರ್ಕಾರ ಕ್ರಮ ಕೈಗೊಳ್ಳಬೇಕು ಜೊತೆಗೆ ಬೆಂಬಲವನ್ನು ನೀಡಬೇಕು ಹಾಗೂ ಸರ್ಕಾರದಿಂದ ದೊರಕುವ ಸೌಲಭ್ಯಗಳು ಯುವಜನರಿಗೆ ಪರಿಣಾಮಕಾರಿಯಾಗಿ ತಲುಪುವಂತಾಗಬೇಕು.

## 11.ಸಾಮಾಜಿಕ ಹೊರಾಟಗಾರರ ಅನುಭವ

➢ **ವಾಣಿ ಪೆರಿಯೋಡಿ– ಬರಹಗಾರ್ತಿ ಮತ್ತು ಸಾಮಾಜಿಕ ಹೋರಾಟಗಾರ್ತಿ**

ಕೋಮು ಸೌಹಾರ್ದತೆ ಅಥವಾ ಜಾತ್ಯಾತೀತತೆಗೆ ಅಂತರ್ಜಾತಿ, ಧರ್ಮೀಯ ಮದುವೆಗಳು ಖಂಡಿತವಾಗಿಯೂ ಸಹಕಾರಿ. ಆದರೆ ಕೆಲವೊಮ್ಮೆ ಬ್ಯಾಕ್‌ಫಯರ್ ಆಗುವ ಸಾಧ್ಯತೆಗಳಿರುತ್ತದೆ. ಇದರ ಆಸುಪಾಸು ತುಂಬಾ ಸವಾಲುಗಳು ಇರುತ್ತದೆ. ಅದಕ್ಕಾಗಿ ಮೊದಲು ಯುವಜನರು ದಿಟ್ಟವಾಗಿ ಬೆಳೆಯಬೇಕು ಮತ್ತು ಎದುರಿಸಬೇಕು. ಯಾವುದೇ ಆಕ್ರೋಶಕ್ಕೆ ಬಲಿಯಾಗದೆ ಸಪೋರ್ಟ್ ಸಿಸ್ಟಂ ಇಟ್ಟುಕೊಂಡು ಬದಲಾವಣೆ ತರಬೇಕು. ಯಾವುದೇ ಜಾತಿ ಧರ್ಮಗಳಲ್ಲಿ ಮೇಲು ಕೀಳು ಎಂಬುದಿಲ್ಲ. ವೈವಿಧ್ಯತೆಗಳಲ್ಲಿ ಶ್ರೇಣಿ ಬೇಕಾಗಿಲ್ಲ.

➢ **ಉಮಾಶಂಕರ್ ಪೆರಿಯೋಡಿ– ಮುಖ್ಯಸ್ಥರು, ಅಜೀಂ ಪ್ರೇಮ್‌ಜೀ ಫೌಂಡೇಷನ್, ಬೆಂಗಳೂರು**

ಒಂದು ರೀತಿಯಲ್ಲಿ ಅಂತರ್ಜಾತಿ, ಧರ್ಮೀಯ ಮದುವೆಗಳು ಸೌಹಾರ್ದತೆಗೆ ಸಹಕಾರಿ. ಒಂದು ಸೌಹಾರ್ದತೆ ಪ್ರಕೃತಿಯೇ ತರುತ್ತದೆ. ಪ್ರಕೃತಿಯಲ್ಲಿ ಬದುಕಲು ಸೌಹಾರ್ದತೆ ಅಗತ್ಯ. ಅದು ಪ್ರಕೃತಿಯ ನಿಯಮ. ಅದನ್ನು ಇತಿಹಾಸವೂ ತೋರಿಸಿಕೊಟ್ಟಿದೆ. ಕೋಮುವಾದ ಮತ್ತು ಬೇರೆ ಬೇರೆ ಜಾತಿಗಳ ಮಧ್ಯದ ಜಗಳವನ್ನು ಸೌಹಾರ್ದತೆ ತರಲು ಸ್ತರಮಟ್ಟದಲ್ಲಿ ಸಾಧ್ಯತೆ ಇರುವುದೇ ಅಂತರ್ಜಾತಿ, ಧರ್ಮಿಯ ಮದುವೆಗೆ. ಎರಡು ಕಡೆಯ ಜನರು ಮದುವೆಯಾಗುವುದರಿಂದ ಮುಂಬರುವ ಪೀಳಿಗೆ ಎರಡು ಜಾತಿ ಅಥವಾ ಧರ್ಮದ ಮಧ್ಯೆ ಬರುತ್ತದೆ. ಜಾತಿ ಧರ್ಮದ ಮಧ್ಯೆ ಮಹಾವ್ಯತ್ಯಾಸಗಳೇನಿಲ್ಲ. ಚಿಕ್ಕಪುಟ್ಟದಿರುತ್ತದೆ. ಆಹಾರ, ಭಾಷೆಯ ಮೇಲೆ ಅಷ್ಟೆ. ಸೌಹಾರ್ದತೆಗೆ ಇಂತಹ ಮದುವೆಗಳು ತುಂಬಾ ಚಂದ ಸಹಾಯವಾಗುತ್ತದೆ. ಸವಾಲುಗಳು ಹೊಸದಲ್ಲ ಮೊದಲಿನಿಂತಲೂ ಇತ್ತು. ಸವಾಲುಗಳನ್ನು ಯುವಜನರು ಧೈರ್ಯವಾಗಿ ಎದುರಿಸಬೇಕು. ಮೊದಲಿಗಿಂತಲೂ ಈಗಿನ ಪರಿಸ್ಥಿತಿ ಚೆನ್ನಾಗಿದೆ. ಈಗ ಸಾಕಷ್ಟು ಅಂತರ್ಜಾತಿ ಮತ್ತು ಅಂತರ್ ಧರ್ಮಿಯ ಮದುವೆಗಳು ನಡೆಯುತ್ತಿವೆ.

ಮನುಷ್ಯ ಮನುಷ್ಯರ ಮಧ್ಯೆ ಪ್ರೀತಿ ಹುಟ್ಟುವುದೇನು ಹೊಸದಲ್ಲ, ತುಂಬಾ ಸಮಯದಿಂದ ಇದು ನಡೆದುಕೊಂಡು ಬಂದಿದೆ. ಪುರಾಣದಲ್ಲೂ ಇಂತಹ ಎಷ್ಟೋ ಮದುವೆಗಳಿವೆ. ಕೆಲವೊಮ್ಮೆ ಪ್ರೀತಿಸಿ ಮದುವೆಯಾಗಿ ಬೇರೆ ಊರಿಗೆ ಹೋಗುವ ಪರಿಸ್ಥಿತಿಯು ಬರುತ್ತದೆ ಮತ್ತು ಹಳ್ಳಿಯಲ್ಲಿ ನೆಲೆಸಿದವರೂ ಕೂಡ ಇದ್ದಾರೆ. ಪ್ರೀತಿಯಲ್ಲಿ ಸೋಲುತ್ತಾರೆ ಎಂದು ಹೇಳುತ್ತಾರೆ ಆದರೆ ಪ್ರೀತಿಸಿ ಚೆನ್ನಾಗಿ ಬದುಕುವವರೂ ತುಂಬಾ ಜನ ಇದ್ದಾರೆ. ನಾನು ಅಂತರ್ಜಾತಿ ಮದುವೆಯಾಗಿದ್ದರಿಂದ ಮರ್ಯಾದೆ ಹೋಗಲಿಲ್ಲ ಅದರ ಬದಲಾಗಿ ಹೆಚ್ಚೆ ಸಿಕ್ಕಿತು.

➢ **ರೇಖಾಂಭ– ಸಂಗೀತ ಕಲಾವಿದೆ, ಸಾಮಾಜಿಕ ಹೊರಾಟಗಾರ್ತಿ, ಶಿವಮೊಗ್ಗ**

ಅಂತರ್ಜಾತಿ ಮತ್ತು ಅಂತರ್ ಧರ್ಮಿಯ ಮದುವೆಯಿಂದಾಗಿ ಸಾಮಾಜಿಕ ಬದಲಾವಣೆ ಸಾಧ್ಯನಾ?. ಈ ಬಗ್ಗೆ ಹೇಳಲು ಬರುವುದಿಲ್ಲ. ಮುಂದೆ ಆಗುತ್ತೆ ಅನ್ನುವ ಭರವಸೆಯಲ್ಲಿ ಸಾಗಬಹುದು ಅಷ್ಟೆ. ಯಾವುದೇ ಸಿದ್ಧಾಂತಕ್ಕೋಸ್ಕರ ಮದುವೆ ಆಗಲೇಬಾರದು ಅಥವಾ ನಾವು ಸಾಮಾಜಿಕ ಬದಲಾವಣೆ ತರುತ್ತೇವೆ ಅನ್ನುವ ಉದ್ದೇಶ ಇಟ್ಟುಕೊಂಡು ಮದುವೆ ಆಗಲೇ ಬಾರದು. ಯಾಕಂದ್ರೆ ನಮ್ಮ ವ್ಯಯಕ್ತಿಕ ಬದುಕನ್ನು ಹಾಳುಮಾಡಿಕೊಳ್ಳುತ್ತೇವೆ. ಯಾಕಂದ್ರೆ ಆ ಆದರ್ಶಗಳು ಎಲ್ಲದರಲ್ಲೂ ಇರಲ್ಲ, ನಿತ್ಯ ಬದುಕುವ ಜಂಜಾಟಗಳೇ ಬೇರೆ, ಯಾರಾದ್ರೂ ಪರಸ್ಪರ ಪ್ರೀತಿಸಿದ್ರೆ ಆವಾಗ ಅಲ್ಲಿ ಯಾರೂ ಜಾತಿ, ಧರ್ಮ ನೋಡಬಾರದು. ಪರಸ್ಪರ ಗೌರವವಿದ್ದು, ಪರಸ್ಪರ ಸ್ವಾತಂತ್ರ್ಯದಿಂದಿದ್ದು, ಇಬ್ಬರು ಅವರವರೇ ಆಯ್ಕೆ ಮಾಡಿಕೊಂಡಿರುತ್ತಾರೆ. ಅವರವರು ಆಯ್ಕೆ ಮಾಡಿಕೊಳ್ಳುವುದೇ ಧರ್ಮ, ಅದಕ್ಕೆ ತಕ್ಕ ಹಾಗೆ ಇರಬೇಕು. ಅದರ ನಡುವೆ ಯಾವುದೇ ಜಾತಿ, ಧರ್ಮ ಅಡ್ಡಿ ಬರಬಾರದು. ಅದು ತಾನಾಗಿಯೇ ಆಗುತ್ತೆ. ಅದು

ಮನುಷ್ಯರ ಪ್ರಕೃತಿಯ ಧರ್ಮ. ನಮಗೆ ಬೇಕಾಗಿ, ಬೇಡವಾಗಿ ಅಲ್ಲ. ನಾವು ಸಮಾಜ ಬದಲಾಗುತ್ತೆ ಅಂತ ಪ್ರೀತಿಸಿರೊರಲ್ಲ, ಪ್ರೀತಿಸ್ತೀವಿ ಆಗ ಧರ್ಮ ಅಡ್ಡ ಬರಬಾರದು. ಅಡ್ಡಿ ಬರಬಾರದು ಅನ್ನೋದು ಸಮಾಜದ ಜವಾಬ್ದಾರಿಯೇ ಹೊರತು ಯುವಜನರದ್ದು ಅಲ್ಲ.

- **ಭೂಮಿ ಗೌಡ– ನಿವೃತ್ತ ಪ್ರಾಧ್ಯಾಪಕರು, ಮಂಗಳೂರು**

ಯುವಜನರು ಆಕರ್ಷಣೆಗೆ ಒಳಗಾಗುವುದು ಸಹಜ. ಜೊತೆಗೆ ಹಲವಾರು ಕನಸು ಕಾಣುತ್ತೇವೆ ಆದರೆ ಎಲ್ಲವೂ ನಾವು ಅಂದುಕೊಂಡಂತೆ ಸಾಗುವುದಿಲ್ಲ. ಹಾಗಾಗಿ ನಾವು ಎಚ್ಚರದಿಂದಿರುವ ಅಗತ್ಯತೆಯು ಕೂಡ ಇದೆ. ಮೊದಲಿಗೆ ನಾವು ಆರ್ಥಿಕವಾಗಿ ಸದೃಢರಾಗಬೇಕು. ಅಂತಹ ಸಂದರ್ಭದಲ್ಲಿ ಮನೆಯವರನ್ನೂ, ಊರಿನವರನ್ನೂ, ಸಮಾಜವನ್ನು ಒಪ್ಪಿಸುವುದು ಸುಲಭ ಆಗುತ್ತೆ. ಉದ್ಯೋಗ, ಮುಂದಿನ ಭವಿಷ್ಯ ಈ ಕುರಿತು ಯೋಚಿಸಿ, ಚಿಂತಿಸಿ, ಚರ್ಚಿಸಿ ನಿರ್ಧಾರ ಕೈಗೊಳ್ಳಬೇಕು. ಸವಾಲುಗಳು ಸಹಜವಾಗಿಯೇ ಬರುತ್ತದೆ, ಅದನ್ನು ನಿಭಾಯಿಸುವ ಶಕ್ತಿ ಇದ್ದರೆ ಮಾತ್ರ ಅದಕ್ಕೆ ಕೈ ಹಾಕಬೇಕು.

## 12. ಉಪಸಂಹಾರ

ಭಾರತೀಯ ಸಮಾಜ ಬಹು ಸಂಸ್ಕೃತಿಯ ಬಹುತ್ವದ ಪ್ರತೀಕ. ಒಂದು ಪ್ರದೇಶದ ಜನರ ಬದುಕಿನ ರೀತಿ ನೀತಿಗೂ ಮತ್ತೊಂದು ಪ್ರದೇಶದ ಜನ ಸಮೂಹದ ಬದುಕಿಗೂ ಭಿನ್ನತೆಗಳಿವೆ. ಸಾಮಾಜಿಕ ಜೀವನಕ್ಕೆ ಸಂಬಂಧಿಸಿದಂತೆ ಅನೇಕ ಚೌಕಟ್ಟುಗಳನ್ನ ಸಾಂಸ್ಥಿಕ ರೂಪಗಳನ್ನ ನಿರ್ಮಿಸಿಕೊಂಡಿದ್ದೇವೆ. ಇದರಲ್ಲಿ ಕುಟುಂಬ ಮತ್ತು ವಿವಾಹಕ್ಕೆ ಸಂಬಂಧಿಸಿದಂತೆ ಜಾತಿ ಮತ್ತು ಧರ್ಮ ಬಹಳ ಮುಖ್ಯ ಪಾತ್ರಗಳನ್ನು ನಿರ್ವಹಿಸುತ್ತಿವೆ. ಪ್ರತಿಯೊಬ್ಬರ ವೈಯುಕ್ತಿಕ ಅಭಿಲಾಷೆಗಳು ವೈವಿಧ್ಯಮಯವಾಗಿವೆ. ಪ್ರಜಾಸತ್ತಾತ್ಮಕವಾದ ದೇಶದ ಸಂವಿಧಾನಕ್ಕೆ ಒಳಪಟ್ಟು ಪ್ರತಿಯೊಬ್ಬರು ಬದುಕು ನಡೆಸುತ್ತಿದ್ದೇವೆ. ಆದರೆ ಇಂದು ಜಾತಿ ಮತ್ತು ಧರ್ಮ ತನ್ನ ಮೂಲದ ನೈಜ್ಯತೆಗಳನ್ನು ಮೀರಿ ಪೂರ್ವಾಗ್ರಹ ಪೀಡಿತ ಮನೋವ್ಯಾದಿಯು ಮಾನವ ಬಂಧುತ್ವದ ನೆಮ್ಮದಿಗಳನ್ನ ಬಿಕಾರಿ ಮಾಡಿದೆ. ಎಲ್ಲಾ ವಸ್ತು ವಿಷಯ ಸಂಬಂಧಗಳಲ್ಲಿಯೂ ಜಾತಿ ಮತ್ತು ಧರ್ಮದ ಮುಳ್ಳುಗಳು ನಾಟಿವೆ. ಪ್ರಕೃತಿಯ ಭಾಗವಾಗಿರುವ ಹುಲ್ಲು, ಕಲ್ಲು, ಮರ, ಗಿಡ, ನೀರೂ ಕೂಡ ಯಾವ ಜಾತಿ ಮತ್ತು ಧರ್ಮದ ಸಾಂಕೇತಿಕವೆಂದು ಆಕ್ರಮಿಸಲ್ಪಟ್ಟಿದೆ. ಬನ್ನಿ ಮರವನ್ನು ಮುಟ್ಟದ, ತುಳಸಿಯನ್ನು ತಾಗದ, ಹತ್ತಿಯ ದಾರವನ್ನು ಧರಿಸದ ಜಾತಿಗಳಿವೆ ಮತ್ತು ಧರ್ಮಗಳಿವೆ. ಅದು ಒಂದೊಂದು ಜಾತಿಗೂ ಧರ್ಮಕ್ಕೂ ನಿಷಿದ್ಧವಿದೆ. ಇಲ್ಲಿ ಉತ್ತರಕ್ಕೆ ಮಲಗದ ದಕ್ಷಿಣಕ್ಕೆ ಮುಖಮಾಡದ ಎಡಕ್ಕೆ ಏಳದ ಕೆಳಕ್ಕೆ ನೋಡದ ನಿಯಮ ಸಂಪ್ರದಾಯಿಕ ನಿಷೇಧಗಳಿವೆ. ಎಲ್ಲರು ಹೀಗೆಯೇ ಇದ್ದಾರೆ ಎನ್ನಲಿಕ್ಕಾಗದು ಆದರೆ ಅದನ್ನ ಮೀರಿ ಸಹಜವಾಗಿ ಬದುಕಲು ಭಯಸುವವರನ್ನು ಎಂದಿಗೂ ಸಹಿಸಿಕೊಳ್ಳದ ಸಮಾಜವಿದೆ. ನಾವೊಂದು ವಿಚಿತ್ರವಾದ ಸಾಮಾಜಿಕ ವ್ಯವಸ್ಥೆಯೊಳಗೆ ಉಸಿರಾಡುತ್ತಿದ್ದೇವೆ. ಜಾತಿ ಮತ್ತು ಧಾರ್ಮಿಕ ನಂಬಿಕೆಗಳು ವಿಜ್ಞಾನವನ್ನೇ ಬುಡಮೇಲು ಮಾಡುವಷ್ಟು ಬೆಳೆದು ನಿಂತಿದೆ.

ವಿವಾಹವೆಂಬುದು ಲೈಂಗಿಕ ಸಂತೃಪ್ತಿ ಮತ್ತು ಸಂತಾನೋತ್ಪತ್ತಿಯ ಅಂಗೀಕೃತ ವ್ಯವಸ್ಥೆಯ ಭಾಗ. ಅದೀಗ ನೈತಿಕ ಅನೈತಿಕತೆಯ ನಿಯಂತ್ರಿತ ರೀತಿ ನೀತಿಗಳನ್ನು ಒಳಗೊಂಡ ಸಾಂಸ್ಥಿಕ ಸ್ವರೂಪ. ಜಾತಿ ಧರ್ಮದ ಹೊರಗಿನ ವಿವಾಹಗಳಿಗೆ ನಿಷೇಧ ಒಂದು ಕಡೆಯಾದರೆ ಜಾತಿಯ ಒಳಗೂ ಕೂಡ ನಿಷೇಧಿತ ನಿಯಮಗಳಿವೆ. ಘಟ್ಟದ ಮೇಲಿನ, ಕೆಳಗಿನ ಗುಡಿಕಟ್ಟು ಕುಲ, ನಾಮ, ಗೋತ್ರ ಬೇಧಗಳಿವೆ. ಜಾತಿ ಮತ್ತು ಧರ್ಮಗಳನ್ನ ಮೀರುವ ವಿವಾಹದ ವಿಷಯಕ್ಕೆ ಬಂದಾಗ ಪ್ರೀತಿಗಿಂತ ದ್ವೇಷ, ಮನುಷ್ಯತ್ವಕ್ಕಿಂತ ದಬ್ಬಾಳಿಕೆ ದೌರ್ಜನ್ಯಗಳನ್ನೇ ಕಾಣುತ್ತಿದ್ದೇವೆ. ದೇಶ

ಅಭಿವೃದ್ಧಿಯೊಂದಬೇಕಾದರೆ ಅದಕ್ಕೆ ತೊಡಕಾಗಿರುವ ಜಾತಿ ಧರ್ಮದ ಅಸಮಾನತೆಗಳನ್ನು ಮೀರುವವರು ವಿರಳವಾಗಿದ್ದಾರೆ. ಈ ಅಧ್ಯಯನವನ್ನು ಸೂಕ್ಷ್ಮವಾಗಿ ಗಮನಿಸುವುದಾದರೆ ಸಾಮಾಜಿಕ ಬದುಕಿಗೆ ತೆರೆದುಕೊಳ್ಳುವ ಯುವ ಮನಸ್ಸುಗಳನ್ನ ಜಾತಿ ಮತ್ತು ಧರ್ಮ ಎಷ್ಟಾಗಿ ನಿಯಂತ್ರಿಸುತ್ತಿದೆ ಎನ್ನುವುದನ್ನು ಅರಿಯಬಹುದು. ತನಗೆ ಬೇಡದಿರುವ ಜಾತಿಯನ್ನು ಮೀರಲೂ ಅಧೈರ್ಯ ಆತಂಕಗಳಿವೆ. ಅದು ನಾವು ಆಶ್ರಹಿಸಿದವರು ನಮ್ಮನ್ನು ತಿರಸ್ಕರಿಸುವರು ಎಂಬುದರ ಜೊತೆಗೆ ಈ ಸಮಾಜ ನಮ್ಮನ್ನು ಬಾಳಲು ಬಿಡಲಾರದು ಎನ್ನುವ ಭಯವೇ ಹೆಚ್ಚು ಕಾಡುವಂತದ್ದಾಗಿದೆ. ದೇಶದ ಸಂವಿಧಾನವೇ ವಿವಾಹದ ಆಯ್ಕೆಯನ್ನು ಸ್ವತಂತ್ರಗೊಳಿಸಿದ್ದರೂ ಅದಕ್ಕೆ ಬೇಕಾದ ಕಾನೂನಿನ ರಕ್ಷಣೆಗಳಿದ್ದರೂ ಅಲಿಖಿತವಾದ ಸಾಮಾಜಿಕ ಕಟ್ಟುಪಾಡುಗಳು ಸಂವಿಧಾನಕ್ಕೆ ಸವಾಲೆಸೆಯುತ್ತಿವೆ.

ಸಂಗಾತಿಯ ಆಯ್ಕೆ ಮತ್ತು ಪ್ರೀತಿಯ ವಿಷಯಕ್ಕೆ ಬಂದಾಗ ಪ್ರತಿಯೊಬ್ಬರಿಗೂ ಅವರದ್ದೇ ಆದ ಆಸೆ ಕನಸ್ಸುಗಳಿವೆ. ನಮ್ಮನ್ನ ಅರ್ಥ ಮಾಡಿಕೊಳ್ಳುವರು ಸುಖ ಸಂತೋಷದಿಂದ ಬದುಕುವಂತೆ ಆದರ್ಶರಾದವರು, ನಮ್ಮ ಸಂಗಾತಿಯಾಗಬೇಕು ಎಂದು ಎಲ್ಲರ ಸಹಜ ನಿರೀಕ್ಷೆಗಳಿರುತ್ತದೆ. ಇದಕ್ಕೆ ಪೂರಕವಾಗಿ ನಿರ್ಧರಿಸುವ ಯಾವ ತೀರ್ಮಾನಗಳು ಬಹುಪಾಲು ಯುವಜನರಿಗೆ ಇರಲಿಕ್ಕಿಲ್ಲ. ಇದನ್ನ ಮೀರಬೇಕಾದರೆ ಅವರ ಕುಟುಂಬ ಮತ್ತು ಸಮಾಜದ ಮನಸ್ಥಿತಿಗಳಿಗೆ ಅನುಗುಣವಾಗಿ ಹೋರಾಟವನ್ನುಂಟು ಮಾಡಲೇಬೇಕಾಗಿದೆ. ಪ್ರೀತಿಸುವವರಿಗೆ ಎದುರಾಗುವ ಮೊದಲ ಸವಾಲೆಂದರೆ ಅದು ಜಾತಿ ಮತ್ತು ಧರ್ಮಗಳದ್ದೇ ಆಗಿರುತ್ತದೆ. ಆ ನಂತರ ಅವರ ಆರ್ಥಿಕ ಸ್ಥಿತಿಗತಿಗಳನ್ನ ಗಮನಿಸಲಾಗುತ್ತದೆ. ಮೇಲಿನ ಅಧ್ಯಯನದ ಹೇಳಿಕೆಗಳನ್ನು ಗಮನಿಸಬಹುದು ಬಹುತೇಕವಾಗಿ ಪ್ರೀತಿ ಸಹಜ ಯಾರು ಯಾರನ್ನ ಬೇಕಾದರೂ ಪ್ರೀತಿಸಿ ಮದುವೆಯಾಗಬಹುದು ಎಂಬ ಅಭಿಪ್ರಾಯಗಳು ನಿಧಾನಕ್ಕೆ ತಮ್ಮ ಸ್ವಂತ ಪ್ರಶ್ನೆಯಾಗಿ ಬಂದಾಗ ಕುಟುಂಬ ಮತ್ತು ಸಮಾಜದ ನೆಪಗಳು ಹೆಚ್ಚಾಗಿ ಕಾಣಸಿಗುತ್ತವೆ. ಅದರೊಳಗೆ ಕುಟುಂಬದವರ ಪ್ರೀತಿ ನಂಬಿಕೆ ಸಮಾಜದಲ್ಲಿನ ಗೌರವ ಘನತೆಗಳ ಪ್ರಶ್ನೆಗಳಿವೆ. ಮುಂದಿನ ಭವಿಷ್ಯದ ಆತಂಕವಿದೆ. ರಕ್ಷಣೆಯ ಭಯವಿದೆ.

ಪ್ರೀತಿಸಿ ಜಾತಿ ಮತ್ತು ಧರ್ಮವನ್ನು ಮೀರಿ ಮದುವೆಯಾಗಬಹುದು ಎಂಬ ಪ್ರಶ್ನೆಗೆ ಚಿತ್ರದುರ್ಗ ಭಾಗದ 48% ಯುವಜನರು ಸಹಮತಗಳನ್ನ ನೀಡಿದ್ದಾರೆ. ಸಂಗಾತಿಯ ಆಯ್ಕೆ ವಯಕ್ತಿಕ ಎಂದು 43% ರಷ್ಟು, ಹಿರಿಯರ ನಿರ್ಧಾರವೆಂದು 13% ರಷ್ಟು ಹಾಗೂ ಹೆತ್ತವರೊಂದಿಗೆ ಚರ್ಚಿಸಿ ನಿರ್ಧರಿಸುತ್ತೇವೆ ಎಂದು 55% ರಷ್ಟು ಯುವಜನರು ಪ್ರತಿಕ್ರಿಯಿಸಿದ್ದಾರೆ. ಎಂದರೆ ಸಂಗಾತಿಯ ಆಯ್ಕೆ ಪ್ರಜ್ಞಾಪೂರ್ವಕವಾಗಿ ವಯಕ್ತಿಕವಾಗಿದ್ದರೂ ಅದರ ಮೇಲಿನ ಅವಲಂಬನೆ ಮತ್ತು ನಿಯಂತ್ರಣ ಎಷ್ಟು ಗಂಭೀರವಾಗಿದೆ ಮತ್ತು ಹಿಡಿತದಿಂದ ಕೂಡಿದೆ ಎಂದು ಅರ್ಥೈಸಿಕೊಳ್ಳಬಹುದು. ಇದರ ಹಿಂದೆ ಕುಟುಂಬ ಮತ್ತು ಜಾತಿಯ ಮರ್ಯಾದೆ ಎಂಬ ಕಾಣದ ನಿಯಂತ್ರಣದ ಪ್ರಶ್ನೆಯೂ ಕೂಡ ಅಡಗಿದೆ. ಜಾತಿಯನ್ನ ಮೀರಿದ ವಿವಾಹಕ್ಕೆ 55% ಬೆಂಬಲಿಸಿ ಪ್ರತಿಕ್ರಿಯಿಸಿದರೆ ಧರ್ಮವನ್ನು ಮೀರಿ 37% ರಷ್ಟು ಯಾವುದಾರೂ ಬೆಂಬಲಿಸುತ್ತೇವೆ ಎಂದು 33% ರಷ್ಟು ಪ್ರತಿಕ್ರಿಯೆಗಳು ಬಂದಿವೆ. ಅದರಲ್ಲಿ ಚಿತ್ರದುರ್ಗ ಭಾಗದ ಯುವಜನ ಜಾತಿಯನ್ನು ಮೀರಿ ಇತರೆ ಧರ್ಮಗಳಲ್ಲಿ ವಿವಾಹ ಆಗಬಹುದು ಎಂದಾದರೆ ದಕ್ಷಿಣ ಕನ್ನಡದಲ್ಲಿ ಧರ್ಮವನ್ನು ಮೀರುವುದು ಸವಾಲೆಂಬುದು ತಿಳಿಯುತ್ತದೆ.

ಮರ್ಯಾದೆ ಹತ್ಯೆಗಳು ಅಮಾನವೀಯವೆಂದು 94% ರಷ್ಟು ತಿಳಿಸಿದ್ದಾರೆ. ಸರಿ ಎಂದು 5% ತಿಳಿಸಿದ್ದಾರೆ. ಅಂತರ ಜಾತಿ ಧರ್ಮದಲ್ಲಿ ವಿವಾಹವಾದವರಿಗೆ ಸರ್ಕಾರ ಮತ್ತು ಕಾನೂನಿನ ರಕ್ಷಣೆ ಇರಬೇಕೆಂದು ಬಹುತೇಕ 92% ಮತ್ತು ಹಣಕಾಸಿನ ನೆರವು ದೊರೆಯಬೇಕು ಎಂದು 87% ರಷ್ಟು ಸಹಮತಗಳನ್ನು ತಿಳಿಸಿದ್ದಾರೆ. ಕೊಲ್ಲುವುದು ಹಿಂಸಿಸುವುದು ಮಾನವೀಯ ಬದುಕುವ ಹಕ್ಕು, ಸ್ವಾತಂತ್ರಗಳು ಮುಕ್ತವಾಗಿರಬೇಕು ಎಂಬುದು ಯುವಜನರ ಆಶಯ. ಜಾತಿವ್ಯಾದಿ ಮನಸ್ಥಿತಿಯನ್ನು ಪೋಷಿಸಿಕೊಂಡ ಯುವಜನರು ಯಾವುದೇ ಕಾರಣಕ್ಕೂ ನಮ್ಮ ಜಾತಿ ಕುಲ

ಕೆಡಿಸಲಾರೆವು ಎನ್ನುವ ನಿಲುವುಗಳಲ್ಲಿದ್ದಾರೆ. ಅಂದರೆ ಜಾತ್ಯಾತೀತ ರಾಷ್ಟ್ರದಲ್ಲಿ ಸ್ವಜಾತಿಯ ಬೇರು ಎಷ್ಟು ಆಳವಾಗಿವೆ ಎನ್ನುವುದನ್ನ ಅರಿಯಬಹುದು.

ಜಾತಿ ಧರ್ಮದ ಶ್ರೇಷ್ಟ ಕಲ್ಪನೆಯನ್ನು ಬಿಟ್ಟುಕೊಡದವರು ಅನ್ಯ ಸಂಸ್ಕೃತಿಯನ್ನು ಬಹುತ್ವದ ಭಿನ್ನತೆಯನ್ನು ಗೌರವಿಸುವುದರಲ್ಲಿ ಅನುಮಾನಗಳಿವೆ. ತನ್ನ ಸಂಸ್ಕೃತಿಯಂತೆಯೇ ಇತರರ ಸಂಸ್ಕೃತಿ ಎಂದು ಭಾವಿಸುವುದು ಗೌರವಿಸುವುದು ಹೃದಯ ವೈಶ್ಯಲ್ಯತೆಯನ್ನು ಮೆರೆಯುತ್ತದೆ. ಕೆಲವೊಂದು ಅಂತರ್ಜಾತಿ, ಧರ್ಮದಲ್ಲಿ ವಿವಾಹವಾದವರೂ ಕೂಡ ಒಂದೇ ಜಾತಿ ಅಥವಾ ಧರ್ಮದ ಸಂಸ್ಕೃತಿಯನ್ನು ಅನುಸರಿಸಲಾಗುತ್ತಿದೆ. ಈ ಸಮಾಜ ಅವಮಾನಗೊಳಿಸಿದ ಸಂಸ್ಕೃತಿಯನ್ನು ಕೈ ಬಿಡುವುದರ ಜೊತೆ ಮೇಲರಿಮೆಯ ಸಾಂಸ್ಕೃತಿಕ ಮನೋಭಾವನೆಯೂ ಕೂಡ ಅಷ್ಟೆ ಅಪಾಯಕಾರಿಯಾದದ್ದು. ಅಣ್ಣ ಯಾವ ಜಾತಿಯಲ್ಲಿಯೇ ಮದುವೆಯಾಗಿದ್ದರೂ ತಂಗಿ ಮಾತ್ರ ಕುಟುಂಬಕ್ಕೆ ಗೌರವ ತಂಡುಕೊಡುವ ಜಾತಿಯಲ್ಲಿಯೇ ವಿವಾಹವಾಗಬೇಕೆಂದು ಎಚ್ಚರವಹಿಸುವ ಅಂತರ ವಿವಾಹಿತರ ಜಾಣತನಗಳೂ ಇವೆ. ಧೈರ್ಯ ಮಾಡಿ ಬದಲಾವಣೆ ಭಯಸುವ ಯುವ ಮನಸ್ಸುಗಳಿಗೆ ನಾನಾವಿಧದಲ್ಲಿ ಅವರನ್ನು ನಿಯಂತ್ರಿಸುವ ತಂತ್ರಗಳನ್ನೂ ಈ ಸಮಾಜ ಎಣೆದುಕೊಂಡಿದೆ.

ಬಾಬಾ ಸಾಹೇಬ್ ಡಾ. ಬಿ.ಆರ್ ಅಂಬೇಡ್ಕರ್ "ದಿ ಅನ್ನಿಹಿಲೇಷನ್ ಆಫ್ ಕ್ಯಾಸ್ಟ್"ದಲ್ಲಿ ಸಾಮಾಜಿಕ ಪೊರೆತೂರ್ಪಿನ (Endosmosis) ಅಗತ್ಯತೆಯ ಬಗ್ಗೆ ಮಾತನಾಡುವಾಗ ಅಂತರ್ಜಾತಿ ವಿವಾಹಗಳು 'ಇದು ಭ್ರಾತೃತ್ವ, ಪ್ರಜಾಪ್ರಭುತ್ವದ ಇನ್ನೊಂದು ಹೆಸರು' ಎನ್ನುತ್ತಾರೆ. ವರ್ಣ ಸಮೀಕರಣದ ಮೂಲಕ ಜಾತಿ ವಿನಾಶವಾಗಬಹದು ಆದರೆ ಅದೇ ಅಂತಿಮ ಪರಿಹಾರ ಎಂದು ಹೇಳಲಾಗದು. ಆದರೆ ಸಮಾಜದೊಳಗಿರುವ ಜಾತಿ ಅಸಮಾನತೆಯನ್ನು ಅಳಿಯಲು ಅಂತರ್ಜಾತಿ, ಧರ್ಮದ ವಿವಾಹಗಳು ಮುಖ್ಯವಾಗಬಹುದು ಎಂದು ಅಭಿಪ್ರಾಯಿಸಿದ್ದಾರೆ. ಆ ಹಿಂದೆಯೇ ಕಟೋರ ಸಮಾಜದಲ್ಲಿಯೂ ಅಂತರ್ಜಾತಿ ವಿವಾಹವನ್ನು ಪ್ರಯೋಗಾತ್ಮಕವಾಗಿ ನಡೆಸಿದ ಬಸವಣ್ಣ ನಮ್ಮಗಳಿಗೆ ಆದರ್ಶವಾಗಬೇಕು. ಹಿಂದೂ ಸಮಾಜವನ್ನು ಪ್ರತಿನಿಧಿಸುವ ರಾಮಾಯಣ ಮತ್ತು ಮಹಾಭಾರತ ಕತೆಯೊಳಗಿನ ಪಾತ್ರದ ಬಹುಪಾಲು ಅಂತರ್ಜಾತಿಯ ಪ್ರೇಮವಿವಾಹಗಳಿಂದನೇ ಕೂಡಿದೆ. ಭಾರತೀಯ ಸಂಸ್ಕೃತಿಯ ಪುರಾತನವನ್ನು ಬಿಡಿಸಿ ನೋಡಿದರೆ ಪ್ರೇಮ ಮತ್ತು ಸಂಗಾತಿಯ ಆಯ್ಕೆಗಳು ಜಾತಿ ಕುಲ, ಮತಗಳನ್ನು ಮೀರಿದ ಮಧುರ ಸಂಬಂಧಗಳನ್ನ ಕಾಣಬಹುದು.

ರಾಮಾಯಣ ಮಹಾಭಾರತದ ಸಾಂಸ್ಕೃತಿಕ ಚರಿತ್ರೆಯಲ್ಲಿ ಜಾತಿ ಮತಕ್ಕೆ ಅಂಟಿದ ರೋಗವಿಲ್ಲದ ಸ್ವಚ್ಚಂದ ಪ್ರೇಮ ವಿವಾಹಗಳು, ಗಂಧರ್ವ ವಿವಾಹಗಳಾಗಿವೆ. ಶಂತನ ಮಡದಿ ಗಂಗೆ, ಸತ್ಯವತಿ, ವಶಿಷ್ಟ ಮತ್ತು ಅರುಂಧತಿ, ಅರ್ಜುನ ಮತ್ತು ಚಿತ್ರಾಂಗಧೆ, ಭೀಮ ಮತ್ತು ಹಿಡಂಭಿ, ದ್ರೌಪದಿ ಮುಂತಾದ ಅನೇಕ ಉದಾಹರಣೆಗಳನ್ನ ಕಾಣಬಹುದು. ನಿಜವಾಗಿಯೂ ಸನಾತನತೆಯನ್ನು ಧರ್ಮದ ಸಂಸ್ಕೃತಿಯನ್ನು ಗೌರವಿಸುವುದಾದರೆ ಅದನ್ನ ಅನುಸರಿಸಬೇಕಾಗುತ್ತದೆ. ಭಾರತದಲ್ಲಿ ಕಾಲನಂತರದಲಿ ರಾಜಕೀಯವಾಗಿ ಆದ ಬದಲಾವಣೆಗಳಲ್ಲಿ ಹಿಂದು ಮುಸ್ಲೀಮ್ ಪಾಶ್ಚಿಮಾತ್ಯರೊಂದಿಗೆ ಈ ಜನಾಂಗೀಯ ಸಮೀಕರಣಗಳು ನಡೆದು ಹೋಗಿರುವ ಸಾಕ್ಷಿಗಳು ನಮ್ಮ ಕಣ್ಣ ಮುಂದೆಯಿದೆ. ಪರಸ್ಪರರ ಮಧ್ಯೆ ವೈವಾಹಿಕ ಸಂಬಂಧಗಳು ನಡೆದಿರುವುದನ್ನ ಅಂಬೇಡ್ಕರರು ಸ್ಪಷ್ಟವಾಗಿ ವಿವರಿಸಿದ್ದಾರೆ.

ಈ ದೇಶದ ಅಂತರ್ಜಾತಿ ಮತ್ತು ಧರ್ಮಗಳ ವಿವಾಹದ ಹಕ್ಕು ಸ್ವಾತಂತ್ರವನ್ನು ರಕ್ಷಿಸಲು ಸಂವಿಧಾನಿಕವಾದ ಕಾಯ್ದೆ ಕಾನೂನುಗಳು ರಚನೆಗೊಂಡಿವೆ. ವಿಶೇಷ ವಿವಾಹ ಕಾಯ್ದೆ–1954 ಇದು ಒಂದು ಪೌರ ಕಾಯ್ದೆಯಾಗಿದ್ದು, ಜಾತಿ ಧರ್ಮಗಳನ್ನು ಮೀರಿ ಎರಡು ವ್ಯಕ್ತಿಗಳು ಯಾವುದೇ ವಿಧಾನದಲ್ಲಿ ವಿವಾಹವಾಗಲು ಅವಕಾಶ ಮಾಡಿಕೊಟ್ಟಿದೆ. ಮರ್ಯಾದೆ ಹತ್ಯೆಗಳು ನಡೆಯುತ್ತಿರುವ ಸಂದರ್ಭದಲ್ಲಿ ಶಕ್ತಿವಾಹಿನಿ ವರ್ಸಸ್ ಯೂನಿಯನ್ ಆಫ್ ಇಂಡಿಯಾ

(ಯುಒಐ– ಎಐಆರ್2018 ಎಸ್‌ಸಿ 1601) ಮೊಕ್ಕದ್ದಮೆಯಲ್ಲಿ ಅಂತರ್ಜಾತಿ ಧರ್ಮದಲ್ಲಿ ಮದುವೆಯಾದ ದಂಪತಿಗಳ ರಕ್ಷಣೆಯನ್ನು ಖಚಿತಪಡಿಸಿಕೊಳ್ಳಲು ಹಲವು ಶಿಪಾರಸುಗಳನ್ನು ಸೂಚಿಸಿದೆ. ಮರ್ಯಾದೆ ಹತ್ಯೆಗಳಂತಹ ಸಾಮಾಜಿಕ ಕೇಡಿನ ವಿರುದ್ಧ ಹೋರಡಲು ಸಂವಿಧಾನದ 19 ಮತ್ತು 21ನೇ ವಿಧಿಗಳ ಅಡಿಯಲ್ಲಿ ವೈಯುಕ್ತಿಕ ಆಯ್ಕೆಯ ಅಭಿವ್ಯಕ್ತಿಯನ್ನು ರಕ್ಷಿಸಬೇಕೆಂದು ಸುಪ್ರೀಂಕೋರ್ಟ್ ಎತ್ತಿಹಿಡಿಯಿತು. ರಾಜ್ಯ ಸರ್ಕಾರಗಳು ಅಂತರ್ಜಾತಿ ಧರ್ಮದ ವಿವಾಹಗಳನ್ನು ಪ್ರೊತ್ಸಾಹಿಸಲು ಧನ ಸಹಾವನ್ನು ಮತ್ತು ಕಾನೂನಿನ ರಕ್ಷಣೆಯನ್ನು ನೀಡುತ್ತದೆ.

ಪ್ರೇಮಿಸುವವರನ್ನು ದೂರ ಮಾಡುವುದು ಮಹಾ ಪಾಪ ಎನ್ನುವ ಚರ್ಚೆ ಒಂದುಕಡೆಯಾದರೆ, ಇನ್ನೊಂದೆಡೆ ಅದಕ್ಕೆ ಬಹಳಷ್ಟು ಮಿತಿ, ಕಟ್ಟುಪಾಡು, ಸಮಾಜ ಹಾಕುತ್ತದೆ. ಒಂದು ಜೀವಕ್ಕೆ ಇನ್ನೊಂದು ಜೀವದ ಮೇಲೆ, ಸೆಳೆತ, ಪ್ರೀತಿ, ಪ್ರೇಮ ಬಹಳ ನಿಸರ್ಗದತ್ತವಾದುದು. ಭಾರತದಲ್ಲಿ ದಿನಂಪ್ರತಿ ಅದರ ಹೆಸರಿನಲ್ಲಿ ಸಾವು ನೋವು ತಪ್ಪಿದಲ್ಲ. ಕೇರಳದ ಬಹಳಮುಖ್ಯ ಕೇಸಾದ ಹಾದಿಯ ವರ್ಸಸ್ ಅಖಿಲಾ, ಪ್ರಣವ್ ಕೇಸ್‌ಗಳು ಸಮಾಜಕ್ಕೆ ಪಾಠವಾಗಬೇಕಾಗಿದೆ. ನಮ್ಮ ಸುತ್ತ–ಮುತ್ತ ಕಣ್ಣಾಯಿಸಿದರೆ ಇಂತಹ ನೂರಾರು ಸಾವಿರಾರು ಉದಾಹರಣೆಗಳು ನಮ್ಮ ಮುಂದೆ ಕಾಣಸಿಗುತ್ತವೆ. ಪ್ರೀತಿಸಿ ಅಂತರ್ಜಾತಿ ವಿವಾಹವಾದ ಜೋಡಿಗಳಿಗೆ ಬಹಿಷ್ಕರಿಸಿ 15 ರಿಂದ 20 ವರ್ಷ ಕಳೆದಾದ ಮೇಲಿಯೂ ಅವರನ್ನ ಕೊಂದು ಹಾಕಿದ ಕ್ರೂರ ಸಮಾಜದ ಜೊತೆಗೆ ನಾವು ಬದುಕುತ್ತಿದ್ದೇವೆ. ಒಂದು ಸಮಾಜ ಬದಲಾಗುವುದನ್ನ ಕಾಯಬೇಕು ಅಥವಾ ಸಮಾಜ ಬದಲಾಗುವಂತೆ ನೆಗೋಷಿಯೇಷನ್ ಮಾಡಬೇಕು. ಯುವಜನರ ಹಕ್ಕುಗಳಲ್ಲಿ ಒಂದಾದ ಸಂಗಾತಿಯ ಆಯ್ಕೆ ಹಕ್ಕು ಯುವಜನರಿಗೆ ಸಿಗುವಲ್ಲಿ ಹೆಚ್ಚು ಕೆಲಸಗಳು ಆಗಬೇಕಾಗಿದೆ ಎನ್ನುವುದನ್ನು ಈ ಅಧ್ಯಯನ ತೋರಿಸುತ್ತಿದೆ.

ಒಟ್ಟಿನಲ್ಲಿ ಯುವಜನರಲ್ಲಿ ಅಂತರ್ಜಾತಿಯ ಅಂತರ್ ಧರ್ಮೀಯ ಪ್ರೇಮವಿವಾಹದ ಕುರಿತು ಒಂದಷ್ಟು ಆತಂಕಗಳು, ವಯಕ್ತಿಕ ನೆಲೆಯಲ್ಲಿ ಬಹಳವಾಗಿ ಕಂಡು ಬಂದರೆ, ಬೇರೆಯವರು ಆಗುವಾಗಲು ಅವರಿಗೆ ಬಹಳಷ್ಟು ತಳಮಳ, ಭಯ ಕಾಡುತ್ತಿದೆ. ಅದರಲ್ಲೂ ಸಮಾಜದ ಮತ್ತು ಹಿರಿಯರ ಪ್ರೀತಿ ಕಳೆದುಕೊಳ್ಳುವ, ಬೆಂಬಲ ಕಳೆದುಕೊಳ್ಳುವ ಭಯ ಬಹಳವಾಗಿ ಈ ಅಧ್ಯಯನದಲ್ಲಿ ಮತ್ತು ಅಧ್ಯಯನ ತಂಡಕ್ಕೂ ಅನುಭವ ವೇದ್ಯವಾಗಿದೆ. ಮುಂದಿನ ಯುವ ಪೀಳಿಗೆಗೆ ಪ್ರೀತಿ ಹೆಣೆಯುವ ಪ್ರಕ್ರಿಯೆಯೆಯಲ್ಲಿ ಯಾವುದೇ ತರಹದ ಗೋಡೆಗಳು ಇರದೇ ಸ್ವತಂತ್ರ್ಯವಾಗಿ ಪ್ರೀತಿ ಎಲ್ಲೆಡೆಯೂ ಹರಡುವಂತಾಗಲಿ, ಹಂಚುವಂತಹ ಸಮಾಜ ಇರಲಿ ಎನ್ನುವ ಭರವಸೆಯಲ್ಲಿ ಮುಂದೆ ಸಾಗುವ.

## 13.ಗ್ರಂಥಋಣ:


1. https://avadhimag.com/%ಇ0%ಃ2%೦6%ಇ0%ಃ3%87%ಇ0%ಃ2%ಃ5%ಇ0%ಃ2%ಃ0%ಇ0%ಃ3%81%ಇ0%ಃ2%97%ಇ0%ಃ2%ಃ3%ಇ0%ಃ3%81–%ಇ0%ಃ2%86%ಇ0%ಃ2%97%ಇ0%ಃ2%ಃಈ%ಇ0%ಃ2%೦6%ಇ0%ಃ3%8ಆ%ಇ0%ಃ2%೦6%ಇ0%ಃ3%82–%ಇ0%ಃ2%85%ಇ0%ಃ2%82%ಇ0%ಃ2%೦4%ಇ0%ಃ2%ಃ0%ಇ0%ಃ3%8ಆ%ಇ0%ಃ2%9ಅ%ಇ0%ಃ2%ಃಇ/ (ಡಾ ಸಿದ್ಧಲಿಂಗಯ್ಯ ವಿಧಾನ ಪರಿಷತ್ ಸದಸ್ಯರಾಗಿದ್ದಾಗ ಮಂಡಿಸಿದ ಮನವಿ)
2. ಡಾ.ಬಾಬಸಾಹೇಬ್ ಅಂಬೇಡ್ಕರ್ ಅವರ ಬರೆಹಗಳು ಮತ್ತು ಭಾಷಣಗಳು: ಸಂಪುಟ–1– ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರ–ಬೆಂಗಳೂರು
3. https://m.varthabharati.in/article/2016_10_11/43788- ದಲಿತರ ದಮನಕ್ಕೆ ಜಾತಿ ಪದ್ಧತಿಯ ಅಸ್ತ್ರ–ಅರುಂಧತಿ ರಾಯ್

## 14.ಅಡಕಗಳು

### ಪ್ರಶ್ನಾವಳಿ

**ಸೂಚನೆ:** ಸಂವಾದವು ಯುವಜನರಲ್ಲಿ ಸಾಮಾಜಿಕ ಅರಿವನ್ನು ಮೂಡಿಸುತ್ತಿರುವ ಸಂಸ್ಥೆ. ಸಂವಾದದ ವಿದ್ಯಾರ್ಥಿ ವಿದ್ಯಾರ್ಥಿನಿಯರು *ಅಂತರ್ಜಾತಿ ಮತ್ತು ಅಂತರ್ ಧರ್ಮೀಯ ವಿವಾಹದ ಬಗ್ಗೆ ಯುವಜನರ ನಿಲುವು ಮತ್ತು ಈ ಬಗ್ಗೆ ಅವರಲ್ಲಿ ಇರುವ ಗೊಂದಲ, ಭಯ, ಮತ್ತು ಒತ್ತಡಗಳ ಕುರಿತು ಕಿರು ಸಂಶೋಧನೆಯನ್ನು ಮಾಡುತ್ತಿದ್ದೇವೆ.*

*ನಿಮಗೆ ಒಪ್ಪಿಗೆ ಇದ್ದಲ್ಲಿ ಈ ಪ್ರಶ್ನಾವಳಿಯನ್ನು ಉತ್ತರಿಸಿ ಹಿಂದಿರುಗಿಸಿ. ಈ ಮಾಹಿತಿಯನ್ನು ಕೇವಲ ಅಧ್ಯಯನದ ಉದ್ದೇಶಕ್ಕಾಗಿ ಮಾತ್ರ ಬಳಸುತ್ತೇವೆ ಮತ್ತು ಸಂಶೋಧನೆಯ ನೈತಿಕತೆಯ ಭಾಗವಾಗಿ ಯಾವುದೇ ಕಾರಣಕ್ಕೂ ನಿಮ್ಮ ಹೆಸರು, ಮಾಹಿತಿ ಬಹಿರಂಗಗೊಳಿಸುವುದಿಲ್ಲ ಎಂದು ಈ ಮೂಲಕ ದೃಢಪಡಿಸುತ್ತೇವೆ.*

| | | |
|---|---|---|
| 1 | **ಹೆಸರು :** | |
| 2 | **ವಿದ್ಯಾಭ್ಯಾಸ :** | |
| 3 | **ನೀವು ಇವಾಗ ಓದುತ್ತಿರುವಿರಿ ಎಂದಾದರೆ ಏನು ಮತ್ತು ಶಿಕ್ಷಣ ಸಂಸ್ಥೆ :** | |
| 4 | **ಕೆಲಸ ಮಾಡುತ್ತಿದ್ದರೆ ಏನು ಕೆಲಸ ಮಾಡುತ್ತಿದ್ದೀರಿ :** | |
| 5 | **ವಯಸ್ಸು :** | |
| 6 | **ಲಿಂಗ (ಜೆಂಡರ್) :** | |
| 7 | **ಜಾತಿ ಮತ್ತು ಉಪಜಾತಿ :** | |
| 8 | **ಧರ್ಮ ಮತ್ತು ಒಳ ಪಂಗಡ :** | |
| 9 | **ಊರು :** | |
| 10 | **ತಾಲ್ಲೂಕು :** | |

11. ನಿಮಗೆ ಬೇರೆ ಜಾತಿ ಧರ್ಮದ ಫ್ರೆಂಡ್ಸ್ ಇದ್ದಾರೆಯೇ?
    A. ಹೌದು ಬಹಳ/ ಆತ್ಮೀಯರಿದ್ದಾರೆ
    B. ಕಡಿಮೆ ಫ್ರೆಂಡ್ಸ್ ಇದ್ದಾರೆ
    C. ಯಾರು ಇಲ್ಲ

12. ನಿಮ್ಮ ಪ್ರಕಾರ ಬೇರೆ ಬೇರೆ ಜಾತಿ ಧರ್ಮಗಳ ಗಡಿಗಳನ್ನು ಮೀರಿ ಸ್ನೇಹ ಮಾಡಬಹುದೇ?
   A. ಮಾಡಬಹುದು
   B. ಮಾಡಬಾರದು
13. ನಿಮ್ಮ ಪ್ರಕಾರ ಯಾವುದೇ ಹುಡುಗ ಹುಡುಗಿ ಬೇರೆ ಬೇರೆ ಜಾತಿ ಧರ್ಮಗಳ ಗಡಿಗಳನ್ನು ಮೀರಿ ಪ್ರೀತಿಯನ್ನು ಮಾಡಬಹುದೇ?
   A. ಮಾಡಬಹುದು
   B. ಮಾಡಬಾರದು

14. ನಿಮ್ಮ ಪ್ರಕಾರ ಯಾವುದೇ ಹುಡುಗ ಹುಡುಗಿಯರು ಬೇರೆ ಬೇರೆ ಜಾತಿ ಧರ್ಮಗಳ ಗಡಿಗಳನ್ನು ಮೀರಿ ಮದುವೆ ಆಗಬಹುದೇ?

   A. ಜಾತಿ ಧರ್ಮದಗಳನ್ನು ಮೀರಿ ಮದುವೆ ಆಗಲೇ ಬಾರದು
   B. ಜಾತಿ ಮೀರಿ ಆಗಬಹುದು ಆದರೆ ಧರ್ಮವನ್ನಲ್ಲ
   C. ಧರ್ಮವನ್ನು ಮೀರಿ ಆಗಬಹುದು ಆದರೆ ಜಾತಿಯನ್ನಲ್ಲ
   D. ಜಾತಿಯಾಗಲಿ ಅಥವಾ ಧರ್ಮವಾಗಲಿ ಅವುಗಳನ್ನ ಮೀರಿ ಮದುವೆ ಆಗಬಹುದು.

15. ನೀವು ಮದುವೆಯಾಗಲು ಬಯಸುವಿರ
   A. ನಾನು ಮದುವೆಯೇ ಆಗುವುದಿಲ್ಲ
   B. ಹೌದು ಸಮಯ ಬಂದಾಗ ಆಗುವೆ

16. ನಿಮ್ಮ ಬಾಳ ಸಂಗಾತಿಯ ಆಯ್ಕೆ ಯಾರು ಮಾಡಬೇಕು
   A. ಬಾಳ ಸಂಗಾತಿಯ ಆಯ್ಕೆಯು ನನ್ನದೆ
   B. ನನ್ನ ಬಾಳ ಸಂಗಾತಿಯ ಆಯ್ಕೆಯು ಹಿರಿಯರು ನಿಶ್ಚಯಿಸದಂತೆ ಆಗುವುದು
   C. ನಾನು ಮತ್ತು ನನ್ನ ಹತ್ತವರೊಂದಿಗೆ ಚರ್ಚಿಸಿ ಜೊತೆಗೆ ತೀರ್ಮಾನಕ್ಕೆ ಬರುತ್ತೇವೆ.

17. ನಾನು ಪ್ರೀತಿಸಿ ಮದುವೆಯಾಗುವ ಸಂದರ್ಭ ಬಂದರೆ.
   A. ಜಾತಿ ಧರ್ಮವನ್ನು ಲೆಕ್ಕಿಸುವುದಿಲ್ಲ
   B. ಜಾತಿಯನ್ನು ಮೀರುತ್ತೇನೆ ಆದರೆ ಧರ್ಮವನ್ನು ಮೀರಲು ಬಯಸುವುದಿಲ್ಲ.
   C. ಧರ್ಮವನ್ನು ಮೀರುತ್ತೇನೆ ಆದರೆ ಜಾತಿಯನ್ನು ಮೀರಲು ಬಯಸುವುದಿಲ್ಲ.
   D. ನಾನು ಜಾತಿ ಧರ್ಮವನ್ನು ಮೀರಿ ವಿವಾಹವಾಗಲು ಬಯಸುವುದಿಲ್ಲ

18. ನಾನು ಜಾತಿ ಧರ್ಮವನ್ನು ಮೀರಿ ವಿವಾಹವಾಗಲು ಬಯಸುವುದಿಲ್ಲವಾದರೆ ಅದಕ್ಕೆ ಕಾರಣ (ಸರಿ ಅನಿಸಿದ ಒಂದಕ್ಕಿಂತ ಹೆಚ್ಚಿನ ಅಂಶಗಳಿಗೂ ಉತ್ತರಿಸಬಹುದು)
   A. ನನಗೆ ಇಷ್ಟವೇ ಇಲ್ಲಾ
   B. ಮನೆಯವರು ಒಪ್ಪುವುದಿಲ್ಲ ಎನ್ನುವ ಭಯವಿದೆ
   C. ಸಮಾಜ ಒಪ್ಪುವುದಿಲ್ಲ ಎನ್ನುವ ಭಯವಿದೆ

D. ಹುಟ್ಟುವ ಮಕ್ಕಳ ಭವಿಷ್ಯದ ಕುರಿತು ಆತಂಕವಿದೆ
E. ಒಡಹುಟ್ಟಿದವರ ಮದುವೆಗೆ ತೊಂದರೆಯಾಗಬಹುದು.
F. ಕುಟುಂಬದ ಘನತೆಗೆ ಧಕ್ಕೆಯಾಗಬಹುದು ಎಂಬ ಭಯ
G. ಅವರ ಸಂಪ್ರದಾಯ ಸಂಸ್ಕೃತಿಗೆ ಹೊಂದಿಕೊಳ್ಳಲು ಕಷ್ಟ
H. ಎರೇಂಜ್ಡ್ ಮದುವೆಯಾದಾಗ ಕುಟುಂಬದಿಂದ ಸಿಗುವ ಸುರಕ್ಷತೆ ಬೆಂಬಲ ಸಿಗದೇ ಹೋಗಬಹುದು ಎನ್ನುವ ಭಯ

19. ನನಗೆ ಜಾತಿ ಧರ್ಮವನ್ನು ಮೀರಿ ವಿವಾಹವಾಗಲು ಇಷ್ಟವೇ ಇಲ್ಲದಿರಲು ಕಾರಣ **(ಮೇಲಿನ ಪ್ರಶ್ನೆಗೆ ಆಯ್ಕೆ ಎ ಆಗಿದ್ದಲ್ಲಿ ಮಾತ್ರ)** ಕಾರಣಗಳು ತಿಳಿಸಿ
(ನಿಮಗೆ ಅನಿಸಿದ ಸೂಕ್ತವಾದ ಕಾರಣವನ್ನು ನಿಮ್ಮದೇ ವಾಕ್ಯದಲ್ಲಿ ಬರೆಯಿರಿ)

20. ಬೇರೆಯವರು ಜಾತಿ ಗಡಿ ಮೀರಿ ಮದುವೆಯಾಗುವುದಾದರೆ

| | ವಿರೋಧಿಸುತ್ತೇನೆ | ಬೆಂಬಲಿಸುತ್ತೇನೆ | ತಟಸ್ಥವಾಗಿರುತ್ತೇನೆ |
|---|---|---|---|
| ಕುಟುಂಬ ಸದಸ್ಯರು | | | |
| ಸ್ನೇಹಿತರು ಪರಿಚಿತರು | | | |
| ನನ್ನ ಜಾತಿ ಧರ್ಮದ ಇತರೆಯವರು ಮದುವೆಯಾದರೆ | | | |

21. ಬೇರೆಯವರು ಧರ್ಮದ ಗಡಿ ಮೀರಿ ಮದುವೆಯಾಗುವುದಾದರೆ

| | ವಿರೋಧಿಸುತ್ತೇನೆ | ಬೆಂಬಲಿಸುತ್ತೇನೆ | ತಟಸ್ಥವಾಗಿರುತ್ತೇನೆ |
|---|---|---|---|
| ಕುಟುಂಬ ಸದಸ್ಯರು | | | |
| ಸ್ನೇಹಿತರು ಪರಿಚಿತರು | | | |
| ನನ್ನ ಧರ್ಮದ ಇತರೆಯವರು ಮದುವೆಯಾದರೆ | | | |

ವಿರೋಧಿಸುವುದಾದರೆ ಕಾರಣಗಳನ್ನು ತಿಳಿಸಿ

22. ಬೇರೆ ಜಾತಿ ಧರ್ಮದಲ್ಲಿ ವಿವಾಹವಾದವರ ಮೇಲೆ ಕುಟುಂಬದವರು ಅಥವಾ ಬೇರೆಯವರು ಹಲ್ಲೆ ಮಾಡುವುದು ಹತ್ಯೆ ಮಾಡುವುದು ಸರಿಯೇ
A. ಸರಿ
B. ತಪ್ಪು

23. ಬೇರೆ ಜಾತಿ ಧರ್ಮದಲ್ಲಿ ಮದುವೆಯಾದವರಿಗೆ ಸರ್ಕಾರವು ಕಾನೂನಿನ ನೆರವುವನ್ನು

**A.** ಕೊಡಬಹುದು

B. ಕೊಡಬಾರದು

24. ಬೇರೆ ಜಾತಿ ಧರ್ಮದಲ್ಲಿ ಮದುವೆಯಾದವರಿಗೆ ಸರ್ಕಾರವು ಹಣಕಾಸಿನ ನೆರವುವನ್ನು

A. ಕೊಡಬಹುದು

B. ಕೊಡಬಾರದು

ಸಂದರ್ಶನದ ದಿನಾಂಕ;

ಸಂದರ್ಶಕರ ಹೆಸರು:

ಸಹಿ:

*************************